# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/71/2017/ಎಆರ್ಇ-13

ಡಾ:ಬಿ.ಆರ್.ಅಂಬೇಡ್ಕರ್ ವೀದಿ.
ಬಹುಮಹಡಿಗಳ ಕಟ್ಟಡ.
ಬೆಂಗಳೂರು-560001.
ದಿನಾಂಕ:30/08/2022.

## ವಿಚಾರಣಾ ವರದಿ

ಉಪಸ್ಥಿತರು: **ಶೋಭಾ ಎಸ್,**
ಅಪರ ನಿಬಂಧಕರು (ವಿಚಾರಣೆಗಳು-13).
ಕರ್ನಾಟಕ ಲೋಕಾಯುಕ್ತ.
ಬೆಂಗಳೂರು.

**ವಿಷಯ:-** ಶ್ರೀ. ಕೆ. ಈಶ್ವರ್ ಪ್ರಸಾದ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೊತ್ತಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:-** 1. ಕಂಪ್ಲೆಂಟ್/ಉಪಲೋಕ್/ಬಿಡಿ/4122/2014/ ಸನಿಕಾಸ-2, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ : 18/11/2016.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/898/ ಗ್ರಾಪಂಕಾ/2016, ಬೆಂಗಳೂರು, ದಿನಾಂಕ : 07/01/2017.

3. ನಾಮ ನಿರ್ದೇಶನ ಸಂಖ್ಯೆ.ಉಪಲೋಕ್-2/ ಡಿಇ/71/2017, ಬೆಂಗಳೂರು, ದಿನಾಂಕ: 17/01/2017.

* * * *

1. ದೂರುದಾರರಾದ ಶ್ರೀ. ಹೆಚ್.ಬಿ. ಶಂಕರಲಿಂಗೇಗೌಡ ಬಿನ್ ಲೇಟ್ ಬೋರಲಿಂಗಯ್ಯ, ಕೆ. ಹೊಸಹಳ್ಳಿ ಗ್ರಾಮ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಕೆ. ಈಶ್ವರ್ ಪ್ರಸಾದ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೊತ್ತಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ದೂರನ್ನು ಸಲ್ಲಿಸಿ, ಸದರಿ ದೂರಿನಲ್ಲಿ ಕುಣಿಗಲ್ ತಾಲ್ಲೂಕು, ಕೊತ್ತಗೆರೆ ಗ್ರಾಮ ಪಂಚಾಯತಿಯಿಂದ 1) ಕಾಮಗಾರಿ ಸಂಕೇತ ಆರ್.ಸಿ/992248711660 2) ಕಾಮಗಾರಿ ಸಂಕೇತ ಆರ್.ಸಿ/992248711662 ಇವುಗಳ ಕಾಮಗಾರಿಗಳನ್ನು ಮಾಡದೇ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು, ಅಧಿಕಾರ ದುರುಪಯೋಗಪಡಿಸಿಕೊಂಡು ಕಾನೂನು ಉಲ್ಲಂಘನೆ ಮಾಡಿ ಅಕ್ರಮವಾಗಿ ಹಣ ಸಂಪಾದನೆ ಮಾಡುತ್ತಿದ್ದಾರೆಂದು, ಈ ಬಗ್ಗೆ ದೂರುದಾರರು ಸಲ್ಲಿಸಿದ ದೂರನ್ನು ಒಂಬಡ್ಸ್‌ಮನ್‌ಗೆ ವರ್ಗಾಯಿಸಿದ್ದು, ಅದರಲ್ಲಿ ಕಾಮಗಾರಿಗಳು ಅಕ್ರಮವಾಗಿರುವುದು ದೃಢಪಟ್ಟಿರುತ್ತದೆ. ಆದ್ದರಿಂದ ಆ.ಸ.ನೌ ರವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ದುರುಪಯೋಗಪಡಿಸಿಕೊಂಡ ಹಣವನ್ನು ವಸೂಲಿ ಮಾಡಿ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕೆಂದು ದೂರು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ರಡಿಯಲ್ಲಿ ಉಲ್ಲೇಖ (1) ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2) ರಲ್ಲಿ ಕಾಣಿಸಿದಂತೆ, ದಿನಾಂಕ: 07/01/2017 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತರವರು ದಿನಾಂಕ : 17/01/2017 ರಂದು ಅಪರ ನಿಬಂಧಕರು (ವಿಚಾರಣೆಗಳು-4) ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು (ವಿಚಾರಣೆಗಳು-4) ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 31/01/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

4. ಅಧಿಕೃತ ಜ್ಞಾಪನ ಸಂಖ್ಯೆ: ಉಪಲೋಕ್-1 & 2/ಡಿಇ/ವರ್ಗಾವಣೆ/2018, ದಿನಾಂಕ:06/08/2018 ರ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಆದೇಶದಂತೆ ಸದರಿ ಇಲಾಖಾ ವಿಚಾರಣೆಯನ್ನು ಅಪರ ನಿಬಂಧಕರು (ವಿಚಾರಣೆಗಳು-4) ರವರಿಂದ ಅಪರ ನಿಬಂಧಕರು (ವಿಚಾರಣೆಗಳು-13) ಶಾಖೆಗೆ ವರ್ಗಾವಣೆಗೊಂಡಿರುತ್ತದೆ.

## <u>ಅನುಬಂಧ-1</u>
## <u>ದೋಷಾರೋಪಣೆ</u>

5. ಆಪಾದಿತ ಸರ್ಕಾರಿ ನೌಕರರಾದ/ಶ್ರೀ. ಕೆ. ಈಶ್ವರ್ ಪ್ರಸಾದ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೊತ್ತಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಆದ ನೀವು 2014-2015 ನೇ ಸಾಲಿನಲ್ಲಿ ಸದರಿ ಕೊತ್ತಗೆರೆ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆ. ಹೊಸಹಳ್ಳಿ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅನುಷ್ಠಾನವಾಗಿರುವ 1) ಗುನ್ನಾಗೆರೆ ರಸ್ತೆಯಿಂದ ತಿಪ್ಪಾಳದ ಜಿಯಾ ಸಾಬ್ ಮನೆಯವರೆಗೆ ಜಲ್ಲಿ ರಸ್ತೆ ಅಭಿವೃದ್ಧಿ ಮತ್ತು 2) ಕೆ. ಹೊಸಹಳ್ಳಿ ಗ್ರಾಮದ ಗುನ್ನಾಗೆರೆಗೆ ಹೋಗುವ ಮುಸ್ಲಿಂ ಬೀದಿಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗಳಲ್ಲಿ ಕಾಮಗಾರಿ ಸಂಕೇತ ಆರ್.ಸಿ/992248711660 ಮತ್ತು ಕಾಮಗಾರಿ ಸಂಕೇತ ಆರ್.ಸಿ/992248711662 ಗಳನ್ನು ಮಾಡದೇ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ, ಈ ಎರಡು ಕಾಮಗಾರಿಗಳಿಗೆ ಸಂಬಂಧಪಟ್ಟಂತೆ, ಕ್ರಮವಾಗಿ ರೂ.2,34,458/- ಮತ್ತು ರೂ.1,95,416/-

ಗಳನ್ನು ಡ್ರಾ ಮಾಡಿ ಬೋಗಸ್ ಹೆಸರುಗಳಲ್ಲಿ ಜಾಬ್ ಕಾರ್ಡ್‌ಗಳನ್ನು ಎನ್.ಎಂ.ಆರ್ ಗಳಿಗೆ ಬಳಸಿ ಒಟ್ಟು ರೂ.4,29,874/- ಗಳ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತೀರಿ. ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕರ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966 ರ 3(i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ.

## ಅನುಬಂಧ-2
## ದೋಷಾರೋಪಣೆಯ ವಿವರ
## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

6. ಶ್ರೀ. ಹೆಚ್.ಬಿ. ಶಂಕರಲಿಂಗೇಗೌಡ ಬಿನ್ ಲೇಟ್ ಬೋರಲಿಂಗಯ್ಯ, ಕೆ. ಹೊಸಹಳ್ಳಿ ಗ್ರಾಮ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಸಂಬೋಧಿಸಲಾಗುವ) ರವರು ದೂರನ್ನು ಈ ಸಂಸ್ಥೆಗೆ ಸಲ್ಲಿಸಿದ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

7. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಕುಣಿಗಲ್ ತಾಲ್ಲೂಕು, ಕೊತ್ತಗೆರೆ ಗ್ರಾಮ ಪಂಚಾಯತಿಯಿಂದ 1) ಕಾಮಗಾರಿ ಸಂಕೇತ ಆರ್.ಸಿ/992248711660 2) ಕಾಮಗಾರಿ ಸಂಕೇತ ಆರ್.ಸಿ/992248711662 ಇವುಗಳ ಕಾಮಗಾರಿಗಳನ್ನು ನೀವು-ಆಪಾದಿತ ಸರ್ಕಾರಿ ನೌಕರರು ಮಾಡದೇ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು, ಅಧಿಕಾರ ದುರುಪಯೋಗಪಡಿಸಿಕೊಂಡು, ಕಾನೂನು ಉಲ್ಲಂಘನೆ ಮಾಡಿ ಅಕ್ರಮವಾಗಿ ಹಣ ಸಂಪಾದನೆ ಮಾಡುತ್ತಿದ್ದಾರೆಂದು, ಈ ಬಗ್ಗೆ ದೂರುದಾರರು ಸಲ್ಲಿಸಿದ ದೂರನ್ನು ಒಂಬಡ್ಸ್‌ಮನ್‌ಗೆ

ವರ್ಗಾಯಿಸಿದ್ದು, ಅದರಲ್ಲಿ ಕಾಮಗಾರಿಗಳು ಅಕ್ರಮವಾಗಿರುವುದು ದೃಢಪಟ್ಟಿರುತ್ತದೆ. ಆದ್ದರಿಂದ, ಸೂಕ್ತ ಕ್ರಮ ಕೈಗೊಂಡು ದುರುಪಯೋಗಪಡಿಸಿಕೊಂಡ ಹಣವನ್ನು ವಸೂಲಿ ಮಾಡಿ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕೆಂದು ದೂರು ಸಲ್ಲಿಸಿದ್ದರು.

8. ನೀವು-ಆಪಾದಿತ ಸರ್ಕಾರಿ ನೌಕರರು ನಿಮ್ಮ ಆಕ್ಷೇಪಣೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಕಿರಿಯ ಇಂಜಿನಿಯರ್ ರವರು ಫಲಾನುಭವಿಗಳ ಹಾಜರಾತಿಗಳನ್ನು ಪಡೆದು ಕೆಲಸ ಮಾಡಿಸುವುದು ನಿಮ್ಮ ಕರ್ತವ್ಯವಾಗಿರುತ್ತದೆಂದು, 7 ದಿನಗಳ ಕೂಲಿ ಕೆಲಸ ನಂತರ ಎಂ.ಬಿ ಪುಸ್ತಕದಲ್ಲಿ ದಾಖಲಿಸಬೇಕಾಗುತ್ತದೆ. ಆ ನಂತರ ಕಂಪ್ಯೂಟರ್‌ನಲ್ಲಿ ದಾಖಲಿಸಿ ನಿಮ್ಮ ಅಧ್ಯಕ್ಷರ ಎಫ್.ಟಿ.ಓ., ಪಾಸ್ ಮಾಡಿದ ನಂತರ ಅಧ್ಯಕ್ಷರು ತಮ್ಮ ಡ್ಯಾಂಗಲ್ ಅನ್ನು ಕಂಪ್ಯೂಟರ್‌ಗೆ ಹಾಕಿ ಪಾವತಿ ಆದೇಶ ಮಾಡಿದರೆ ಮಾತ್ರ ಫಲಾನುಭವಿಗಳ ಖಾತೆಗೆ ಹಣ ಪಾವತಿಯಾಗುವುದು. ಒಂಬಡ್ಸಮನ್ ರವರ ವಿಚಾರಣಾ ಅವಧಿಯಲ್ಲಿ ದಿ: 25/03/2014 ರಂದು ಆಗಿನ ಕೊತ್ತಗೆರೆ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಈ ಎಲ್ಲಾ ಮಾಹಿತಿ ನೀಡದೇ ಪಿ.ಡಿ.ಓ ರವರು ಮರೆ ಮಾಚಿ ವಂಚಿಸಿದ್ದಾರೆಂದು, ಆದರೆ ಹಣಕಾಸಿನ ಸ್ಟೇಟ್‌ಮೆಂಟ್ ನೋಡಿದರೆ ಇದು ಸ್ಪಷ್ಟವಾಗುತ್ತದೆ. ಆದ್ದರಿಂದ ಇದರಲ್ಲಿ ಯಾವುದೇ ಹಣದ ದುರುಪಯೋಗ ಮಾಡಿರುವುದಿಲ್ಲವೆಂದು, ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿರುತ್ತೀರಿ.

9. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿ, ನೀವು ಅಕ್ರಮ ಕಾಮಗಾರಿ ಮಾಡಿ ಲಕ್ಷಾಂತರ ರೂ ಗಳನ್ನು ಸರ್ಕಾರಕ್ಕೆ ವಂಚಿಸಿರುತ್ತೀರೆಂದು, ಆದ್ದರಿಂದ, ಈ ಬಗ್ಗೆ ಸಮಗ್ರ ತನಿಖೆ ಮಾಡಿ ಎಂದು ಕೇಳಿಕೊಂಡಿದ್ದರು.

10. **ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:-**

ಅ) "ಕೊತ್ತಗೆರೆ ಗ್ರಾಮ ಪಂಚಾಯತಿಯಿಂದ 2014-15 ನೇ ಸಾಲಿನಲ್ಲಿ ದೂರುದಾರರು ಹೆಸರಿಸಿರುವ ಕಾಮಗಾರಿಗಳು ನಡೆದಿರುವುದಿಲ್ಲವೆಂದು ನೀವು – ಆಪಾದಿತ ಸರ್ಕಾರಿ ನೌಕರರು ಅಲ್ಲಗಳೆದಿರುವುದಿಲ್ಲ.

ಆ) ದೂರುದಾರರು ಜಿಲ್ಲಾ ಪಂಚಾಯತಿ, ತುಮಕೂರು ರವರಿಗೆ ದೂರು ನೀಡಿದ ನಂತರ ಈ ಕಾಮಗಾರಿಗಳ ಸಮಗ್ರ ತನಿಖೆಗಾಗಿ ಒಂಬಡ್ಸಮನ್ ರವರನ್ನು ನೇಮಿಸಿದ್ದು, ಅವರು ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಿ, ನಿಮ್ಮ ಹೇಳಿಕೆಗಳನ್ನು ದಾಖಲಿಸಿಕೊಂಡು, ಸಂಬಂಧಿಸಿದ ಎಲ್ಲಾ ಕಡತಗಳನ್ನು ಪರಿಶೀಲಿಸಿ ದಿನಾಂಕ : 21/10/2014 ರಂದು ತಮ್ಮ ವರದಿ ಸಲ್ಲಿಸಿರುತ್ತಾರೆ. ಆ ವರದಿಯಲ್ಲಿ ನೀವು ಕೈಗೊಂಡ ಕಾಮಗಾರಿ 1) ಕಾಮಗಾರಿ ಸಂಕೇತ ಆರ್.ಸಿ./992248711660 2)ಕಾಮಗಾರಿ ಸಂಕೇತ ಆರ್.ಸಿ/992248711662 ಇವುಗಳನ್ನು ಅನುಷ್ಠಾನಗೊಳಿಸುವಲ್ಲಿ ನೀವು ಅಕ್ರಮವೆಸಗಿರುತ್ತೀರೆಂದು ಅಭಿಪ್ರಾಯ ಪಟ್ಟಿದ್ದಾರೆ.

**ಇ) ಕಾಮಗಾರಿ ಸಂಕೇತ ಆರ್.ಸಿ/992248711660 ಮಸ್ಟರ್ ರೋಲ್ ಸಂಖ್ಯೆ:**

| ಅ.ನಂ | ಕಾಮಗಾರಿ ಸಂಕೇತ ಸಂಖ್ಯೆ | ಮಸ್ಟರ್ ರೋಲ್ ಸಂಖ್ಯೆ | ಹಣ |
|---|---|---|---|
| 1 | ಆರ್.ಸಿ/992248711660 | 4860 | 41412 |
| 2 | -"- | 5379 | 41412 |
| 3 | -"- | 7935 | 64544 |
| 4 | ಆರ್.ಸಿ/992248711662 | 6493 | 40194 |
| 5 | -"- | 7810 | 46284 |
| 6 | ಆರ್.ಸಿ/992248711660 | 8689 | 33756 |
| 7 | ಆರ್.ಸಿ/992248711662 | 2541 | 49119 |
| 8 | -"- | 8692 | 52200 |
| 9 | -"- | ಬಿಲ್ ಸಂಖ್ಯೆ:18 | 71855 |
| 10 | -"- | ಬಿಲ್ ಸಂಖ್ಯೆ :578 | 78009 |

ಈ) ಮೇಲಿನ ಪಟ್ಟಿಯ ಕ್ರಮ ಸಂಖ್ಯೆ:1 ರಿಂದ 5 ರಲ್ಲಿ ಎನ್.ಎಂ.ಆರ್ ಬಿಲ್ಲುಗಳನ್ನು ನಗದೀಕರಿಸಲಾಗಿದೆ. ಆದರೆ ದಿನಾಂಕ : 25/03/2014 ರಂದು ವಿಚಾರಣಾ ಸಮಯದಲ್ಲಿ ಈ ಮಾಹಿತಿಯನ್ನು ನೀಡದೇ ನೀವು-ಆಪಾದಿತ ಸರ್ಕಾರಿ ನೌಕರರು ವಂಚಿಸಿರುತ್ತೀರಿ. ಅದೇ ರೀತಿ ಕ್ರಮ ಸಂಖ್ಯೆ : 6 ರಲ್ಲಿ ದಿನಾಂಕ: 15/04/2014 ರಂದು ಎನ್.ಎಂ.ಆರ್ ಬಿಲ್ಲನ್ನು ನಗದೀಕರಿಸಲಾಗಿದೆ ಮತ್ತು ಇದೇ ಕಾಮಗಾರಿಗೆ ಸಾಮಗ್ರಿಗಳ ಬಿಲ್ ನಂ.2 ರೂ.33584/- ಬಿಲ್ ಸಂ:16 ರೂ.19740/- ಮತ್ತು ಬಿಲ್ ನಂ.1 58322/- ಬಿಲ್ ಸಂ:2541 ರೂ.49,119/- ಬಿಲ್ಲುಗಳನ್ನು ದಿನಾಂಕ: 28/08/2014 ರಂದು ನಗದೀಕರಿಸಲಾಗಿದೆ. ಅಲ್ಲದೇ ಕ್ರಮ ಸಂಖ್ಯೆ:8 ರಿಂದ 10 ರ ಬಿಲ್ಲುಗಳನ್ನು ಆ್ಯಂಟಿಸಿಪೇಟೆಡ್ ಬಿಲ್ಲುಗಳೆಂದು (ಎಂ.ಐ.ಎಸ್) ಆರೋಪಿಸಲಾಗಿದೆ.

ಉ) ಒಟ್ಟಾರೆ ಕಾಮಗಾರಿ ಸಂಕೇತ ಆರ್.ಸಿ/992248711660ಕ್ಕೆ ಒಟ್ಟು 234458/- ಮತ್ತು ಕಾಮಗಾರಿ ಸಂಕೇತ ಆರ್.ಸಿ/992248711662 ಒಟ್ಟು ರೂ. 795416/- ಗಳನ್ನು ಡ್ರಾ ಮಾಡಲಾಗಿದೆ. ಆದರೆ ಕಚೇರಿಯ ಆದೇಶ ಸಂ: ಓಂಕಾ:ಜಿ.ಪಂ-2:ದೂ:51/2013-14 ದಿನಾಂಕ : 28/03/2014 ರೀತ್ಯಾ ಜಿಲ್ಲಾ/ ರಾಜ್ಯ ಗುಣ ನಿಯಂತ್ರಕರ ವರದಿ ಪಡೆದ ನಂತರವೇ ಹಣ ಡ್ರಾ ಮಾಡಲು ತಡೆಹಿಡಿಯಲಾಗಿತ್ತು. ಇದನ್ನು ಧಿಕ್ಕರಿಸಿ ನೀವು-ಆಪಾದಿತ ಸರ್ಕಾರಿ ನೌಕರರು ಬಿಲ್ಲುಗಳನ್ನು ನಗದೀಕರಿಸಿರುವುದು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.

ಊ) ನೀವು-ಆಪಾದಿತ ಸರ್ಕಾರಿ ನೌಕರರು ಈ ಕೆಳಕಂಡ ಅನರ್ಹ ವ್ಯಕ್ತಿಗಳಿಗೆ ಜಾಬ್ ಕಾರ್ಡ್ ನೀಡಿರುತ್ತೀರಿ.

| ಕ್ರ.ಸಂ | ಜಾಬ್ ಕಾರ್ಡ್ ಸಂ | ಅನರ್ಹ ವ್ಯಕ್ತಿಗಳ ಹೆಸರು | ಅನರ್ಹಕ್ಕೆ ಕಾರಣ |
|---|---|---|---|
| 1 | ಕೆ.ಎನ್.25-004-006-001/826 | ನಾಗೇಶ್ ಮತ್ತು ಸೋಮಶೇಖರ್ | ಬೆಂಗಳೂರಿನಲ್ಲಿ ವಾಸವಾಗಿದ್ದಾರೆ |

| | | | |
|---|---|---|---|
| 2 | 550 | ಅರೀಫ್ ಉಲ್ಲಾ ಖಾನ್ ಮತ್ತು ರೆಹಮತ್ತ ಉಲ್ಲಾಖಾನ್ | ಕೆ. ಹೊಸಹಳ್ಳಿ ಗ್ರಾಮ ವಾಸಿಗಳು |
| 3 | 780 | ಕುಮಾರ್. ನಾಗೇಶ್. ಚಂದ್ರ. ರಾಜು | ಬೋಗಸ್ ಹೆಸರುಗಳು |
| 4 | 820 | ಶಿವರಾಜು. ರಂಗಪ್ಪ. ಲಕ್ಷ್ಮಮ್ಮ. ಸಂಗೀತ | ಬೋಗಸ್ ಹೆಸರುಗಳು |
| 5 | 821 | ಮನು ಭಗವತ್. ಯೋಗೇಶ್ | ಬೋಗಸ್ ಹೆಸರುಗಳು |
| 6 | 822 | ಪವನ್. ಪಲ್ಲವಿ. ಗೋವಿಂದ | ಬೋಗಸ್ ಹೆಸರುಗಳು |
| 7 | 950 | ಸ್ಫೂರ್ತಿ. ಮಧು. ತನುಜ | ಬೋಗಸ್ ಹೆಸರುಗಳು |
| 8 | 60 | ನಾರಸಿಗಯ್ಯ | ಬೋಗಸ್ ಹೆಸರುಗಳು |

ಋ) ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಓಂಬಡ್ಸ್‌ಮೆನ್ ರವರು ತಮ್ಮ ಆದೇಶದಲ್ಲಿ ಶ್ರೀ. ಚಂದ್ರೇಗೌಡ. ಅಧ್ಯಕ್ಷರು. ಗ್ರಾಮ ಪಂಚಾಯತಿ. ಕೊತ್ತಗೆರೆ ಹೋಬಳಿ. ಕುಣಿಗಲ್ ತಾಲ್ಲೂಕು. ತುಮಕೂರು ಜಿಲ್ಲೆ ಹಾಗೂ ನೀವು–ಆಪಾದಿತ ಸರ್ಕಾರಿ ನೌಕರರು 2 ಕಾಮಗಾರಿಗಳ ಸಂಬಂಧ ಕ್ರಮವಾಗಿ ರೂ.2.34.458/– ಮತ್ತು ರೂ.1.95.416/– ಗಳನ್ನು ಡ್ರಾ ಮಾಡಿರುತ್ತೀರೆಂದು ಎರಡೂ ಕಾಮಗಾರಿಗಳಲ್ಲಿ ಬೋಗಸ್ ಹೆಸರುಗಳುಳ್ಳ ಜಾಬ್ ಕಾರ್ಡ್‌ಗಳನ್ನು ಎನ್.ಎಂ.ಆರ್ ಗಳಲ್ಲಿ ಬಳಸಿದ್ದಾರೆಂದು. ಆದ್ದರಿಂದ ಒಟ್ಟು ರೂ.4.29.874/– ಗಳನ್ನು ಶ್ರೀ. ಚಂದ್ರೇಗೌಡ. ಅಧ್ಯಕ್ಷರು ಹಾಗೂ ನಿಮ್ಮಿಂದ ಸಮ ಪ್ರಮಾಣದಲ್ಲಿ ಅಂದರೆ ರೂ.2.14.937/– ಗಳನ್ನು ವಸೂಲಿ ಮಾಡಿ ನರೇಗ ಯೋಜನೆಯ ಲೆಕ್ಕ ಶೀರ್ಷಿಕೆ ಜಮಾ ಮಾಡಲು ಸೂಕ್ತ ಕ್ರಮ ವಹಿಸುವಂತೆ ಸಿ.ಇ.ಓ. ತುಮಕೂರು ರವರಿಗೆ ಸೂಚಿಸಿದ್ದರು.

ಎ) ಬೋಗಸ್ ಜಾಬ್ ಕಾರ್ಡ್‌ಗಳನ್ನು ಬಳಸಿಕೊಂಡು ಕಾಮಗಾರಿಗಳ ಎನ್.ಎಂ.ಆರ್ ಗಳಲ್ಲಿ ಹಣ ಡ್ರಾ ಮಾಡಿರುವ ನಿಮ್ಮಿಂದ-ಆಪಾದಿತ ಸರ್ಕಾರಿ ನೌಕರರು ರೂ.12,668/- ಗಳನ್ನು ವಸೂಲಿ ಮಾಡಿ ನರೇಗ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸೂಚಿಸಿದ್ದರು.

ಏ) ಈ ಎಲ್ಲಾ ಅಂಶಗಳನ್ನು ಪರಿಗಣಿಸಲಾಗಿ ನೀವು-ಆಪಾದಿತ ಸರ್ಕಾರಿ ನೌಕರರು ನಿಮ್ಮ ಕರ್ತವ್ಯದಲ್ಲಿ ದುರುಪಯೋಗಪಡಿಸಿಕೊಂಡು ಕಾಮಗಾರಿಗಳಲ್ಲಿ ಸಾಕಷ್ಟು ಅಕ್ರಮ ನಡೆಸಿ ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿರುವುದು ಕಂಡು ಬರುತ್ತದೆ.

11. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ನೀವು ನೀಡಿರುವ ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ನಿಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು/ಸೂಕ್ತ/ಸಮಂಸಜ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

12. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ನೀವು ಸಾರ್ವಜನಿಕ/ಸರ್ಕಾರಿ ನೌಕರರಾಗಿ ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೇ, ಕರ್ತವ್ಯ ಲೋಪವೆಸಗಿ ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತೀರೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

13. ಈ ಮೇಲ್ಕಂಡ ಕಾರಣಗಳಿಂದಾಗಿ, ಆಪಾದಿತ ಸರ್ಕಾರಿ ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರೆಯುವುದು ಅಗತ್ಯ ಎಂದು ಮೇಲ್ನೋಟಕ್ಕೆ ಕಂಡುಬಂದಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕ ಸೇವಕರಿಗೆ

ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಸಾಕ್ಷ್ಯದ ಆಧಾರಗಳಿಂದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ 3(1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ನಿಮ್ಮ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ಅಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗಿ, ಶಿಸ್ತು ಪ್ರಾಧಿಕಾರವು ಉಲ್ಲೇಖ ಒಂದರಂತೆ ಈ ಸಂಸ್ಥೆಯಿಂದ ವಿಚಾರಣೆ ಮಾಡಲು ಕೋರಲಾಗಿರುವ ಕಾರಣ ನಿಮ್ಮ ವಿರುದ್ಧ ಈ ಆಪಾದನೆ.

14. ಈ ಮೇಲ್ಕಂಡ ದೋಷಾರೋಪಣೆ (Article of charge) ಅನ್ನು ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ : 28/02/2017 ರಂದು ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಹೇಳಿಕೆಯನ್ನು ಪಡೆಯಲಾಯಿತು. ಆ.ಸ.ನೌ ರವರು ದಿನಾಂಕ : 18/09/2017 ರಂದು ತಮ್ಮ ಪರವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಅದರಲ್ಲಿ ದೋಷಾರೋಪಣೆಯಲ್ಲಿ ಮಾಡಿದ ಆಪಾದನೆಯ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ. ತಾನು 2014-15 ನೇ ಸಾಲಿನಲ್ಲಿ ಸದರಿ ಕೊತ್ತಗೆರೆ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆ. ಹೊಸಹಳ್ಳಿ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅನುಷ್ಠಾನವಾಗಿರುವ ಕ್ರ.ಸಂ.1) ಗುನ್ನಾಗೆರೆ ರಸ್ತೆಯಿಂದ ತಿಪ್ಪಾಳದ ಜಿಯಾಸಾಬ್ ಮನೆಯವರೆಗೆ ಜಲ್ಲಿ ರಸ್ತೆ ಅಭಿವೃದ್ಧಿ ಮತ್ತು ಕ್ರ.ಸಂ.2) ಕೆ. ಹೊಸಹಳ್ಳಿ ಗ್ರಾಮದ ಗುನ್ನಾಗೆರೆ ಹೋಗುವ ಮುಸ್ಲಿಂ ಬೀದಿಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗಳಲ್ಲಿ ಕಾಮಗಾರಿ ಸಂಕೇತ ಆರ್.ಸಿ.992248711660 ಮತ್ತು ಕಾಮಗಾರಿ ಸಂಕೇತ ಆರ್.ಸಿ.992248711662 ಗಳನ್ನು ಮಾಡದೇ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಈ

ಎರಡೂ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕ್ರಮವಾಗಿ ರೂ.2,34,458/- ಮತ್ತು ರೂ.1,95,416/- ಗಳನ್ನು ಡ್ರಾ ಮಾಡಿ ಬೋಗಸ್ ಹೆಸರುಗಳಲ್ಲಿ ಜಾಬ್ ಕಾರ್ಡ್‌ಗಳನ್ನು ಬಳಸಿ ಒಟ್ಟು ರೂ.4,29,874/- ಹಣವನ್ನು ದುರುಪಯೋಗ ಮಾಡಿಕೊಂಡಿರುವುದಾಗಿ ತಿಳಿಸಿರುವುದು ಸತ್ಯಕ್ಕೆ ದೂರವಾದ ಅಂಶವಾಗಿರುತ್ತದೆ. ನಿಯಮಾನುಸಾರ ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅಗತ್ಯ ಕ್ರಮ ಕೈಗೊಂಡಿರುತ್ತೇನೆ. ಕಾಮಗಾರಿಗಳು ಪೂರ್ಣಗೊಂಡಿದ್ದು ಅಸ್ತಿತ್ವದಲ್ಲಿರುತ್ತದೆ. ಕೂಲಿ ಹಣವು ಫಲಾನುಭವಿಗಳಿಗಳ ಬ್ಯಾಂಕ್ ಖಾತೆಗಳಿಗೆ ಸಂದಾಯವಾಗಿರುತ್ತದೆ. ದೂರಿನ ಸಂಬಂಧ ಒಂಬಡ್ಸ್‌ಮನ್ ರವರ ತನಿಖಾ ವರದಿಯ ಆಧಾರದ ಮೇಲೆ ಈ ದೋಷಾರೋಪಣೆ ಪಟ್ಟಿ ಜಾರಿ ಮಾಡಿರುವುದು ಸರಿಯಷ್ಟೆ. ಆದರೆ, ಒಂಬಡ್ಸ್‌ಮನ್ ರವರ ತನಿಖಾ ವರದಿಯ ವಿರುದ್ಧ ತಆನು:24/01/2015 ರಲ್ಲಿ ಒಂಬಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರಿಗೆ ಮೇಲ್ಮನವಿ ಸಲ್ಲಿಸಿರುತ್ತೇನೆ. ತನ್ನ ಮನವಿಯನ್ನು ಪರಿಗಣಿಸಿ ಒಂಬಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರವು ಒಂಬಡ್ಸ್‌ಮನ್, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ತುಮಕೂರು ಜಿಲ್ಲಾ ಪಂಚಾಯತ್, ತುಮಕೂರು ರವರ ಆದೇಶದಲ್ಲಿ ಮೇಲ್ಮನವಿದಾರರಿಬ್ಬರಿಂದ ತಲಾ ರೂ.2,14,937/- ಒಟ್ಟು ರೂ.4,29,874/- ವಸೂಲು ಮಾಡಬೇಕೆಂಬ ನಿರ್ಣಯವನ್ನು ಅಸಿಂಧುಗೊಳಿಸಿ ರದ್ದುಪಡಿಸಿರುತ್ತಾರೆ. ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ನಿಯಮ 4.2 ದಲ್ಲಿ ವಿವರಿಸಿರುವಂತೆ ಪ್ರತಿ ಗ್ರಾಮ ಪಂಚಾಯತಿಗೆ ಒಬ್ಬ ಟೆಕ್ನಿಕಲ್ ಅಸಿಸ್ಟೆಂಟ್ ಅಥವಾ ಕಿರಿಯ ಇಂಜಿನಿಯರ್ ಮತ್ತು ಕಂಪ್ಯೂಟರ್ ಆಪರೇಟರ್ ಕಂ ಅಕೌಂಟ್ಸ್ ಕ್ಲರ್ಕ್ ರವರುಗಳ ಜವಾಬ್ದಾರಿಯಾಗಿದ್ದು, ಸದರಿಯವರು ಸಲ್ಲಿಸಿರುವ ಮಸ್ಟರ್ ರೋಲ್ ಪತ್ರಗಳ ಮೇಲೆ ಸಹಿ ಮಾಡಿರುತ್ತೇನೆ. ಆದ್ದರಿಂದ ನಾನು ಈ ಸಂಬಂಧ ಯಾವುದೇ ಲೋಪದೋಷವಾಗಿರುವುದಿಲ್ಲ ಹಾಗೂ ಹಣ ದುರುಪಯೋಗ ಮಾಡಿಕೊಂಡಿರುವುದಿಲ್ಲ. ತನ್ನನ್ನು ಪ್ರಕರಣದಿಂದ ಮುಕ್ತಗೊಳಿಸಲು ಕೋರಿಕೊಂಡಿರುತ್ತಾರೆ.

15. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ಶಂಕರಲಿಂಗೇಗೌಡ ಹೆಚ್.ಬಿ ರವರನ್ನು ಪಿ.ಡಬ್ಲ್ಯೂ-1 ಎಂದು, ಶ್ರೀ. ರಾಮಚಂದ್ರ, ನಿವೃತ್ತ ನಿರ್ದೇಶಕರು ಹಾಗೂ ಒಂಬಡ್ಸ್‌ಮನ್ ರವರನ್ನು ಪಿ.ಡಬ್ಲ್ಯೂ-2 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-8 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement) ಯನ್ನು ದಿನಾಂಕ : 18/10/2019 ರಂದು ಪಡೆದುಕೊಳ್ಳಲಾಗಿರುತ್ತದೆ.

16. ಆ.ಸ.ನೌ ರವರು ಸ್ವತ: ಡಿ.ಡಬ್ಲ್ಯೂ-1 ರಂತೆ ಸಾಕ್ಷ್ಯ ನುಡಿದಿದ್ದು, ತಮ್ಮ ಪರವಾಗಿ ನಿಶಾನೆ ಡಿ-1 ರಿಂದ 8 ರವರೆಗೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

17. ಮಂಡನಾಧಿಕಾರಿಯವರ ಮತ್ತು ಆ.ಸ.ನೌ ರವರ ಪರ ವಕೀಲರ ವಾದ ಆಲಿಸಿದೆ ಮತ್ತು ಆ.ಸ.ನೌ ರವರ ವಕೀಲರು ಹೇಳಿರುವ ಮೌಖಿಕ ವಾದವನ್ನು ಆಲಿಸಿದೆ.

18. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1: ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?**

**ಅಂಶ-2: ಆದೇಶವೇನು?**

19. ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

20. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ-1) ಸಕಾರಾತ್ಮಕವಾಗಿದೆ.**

**ಅಂಶ-2) ಅಂತಿಮ ಆದೇಶದಂತೆ.**

## ಕಾರಣಗಳು

21. **ಅಂಶ-1** : ಈ ಪ್ರಕರಣದಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಶ್ರೀ. ಶಂಕರಲಿಂಗೇಗೌಡ ಹೆಚ್.ಬಿ ರವರನ್ನು ಪಿ.ಡಬ್ಲ್ಯೂ-1 ಎಂದು, ಶ್ರೀ. ರಾಮಚಂದ್ರ, ನಿವೃತ್ತ ನಿರ್ದೇಶಕರು ಹಾಗೂ ಒಂಬಡ್ಸ್‌ಮನ್ ರವರನ್ನು ಪಿ.ಡಬ್ಲ್ಯೂ-2 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-8 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಗುರುತಿಸಿಕೊಳ್ಳಲಾದ ದಾಖಲೆಗಳಲ್ಲಿ ನಿ.ಪಿ-1 ದೂರು ಆಗಿದ್ದು, ನಿ.ಪಿ-2 ಪ್ರಪತ್ರ-1, ನಿ.ಪಿ-3 ಪ್ರಪತ್ರ-2, ನಿ.ಪಿ-4 ಒಂಬಡ್ಸ್‌ಮನ್ ವರದಿ, ನಿ.ಪಿ-5 ದೂರುದಾರರು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿರುವ ಮಾಹಿತಿಗಳು, ನಿ.ಪಿ-6 ಶಾಲಾ ಮಕ್ಕಳ ಹಾಜರಾತಿ ಪುಸ್ತಕದ ದೃಢೀಕೃತ ನಕಲುಗಳು, ನಿ.ಪಿ-7 ಜಾಬ್ ಕಾರ್ಡ್‌ಗಳಲ್ಲಿ ನಮೂದಿಸಿರುವ ಹೆಸರುಗಳು, ನಿ.ಪಿ-8 ಮಾಹಿತಿ ಹಕ್ಕು ಅಧಿನಿಮಯದಡಿ ಪಡೆದಂತಹ ದಾಖಲಾತಿಗಳು ಆಗಿರುತ್ತವೆ.

22. ಪಿ.ಡಬ್ಲ್ಯೂ-1/ಶ್ರೀ. ಶಂಕರಲಿಂಗೇಗೌಡ ಹೆಚ್.ಬಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಕುಣಿಗಲ್ ತಾಲ್ಲೂಕು, ಹೊಸಹಳ್ಳಿ ಗ್ರಾಮದ ನಿವಾಸಿ. ತನಗೆ ಆ.ಸ.ನೌ ಈಶ್ವರ್ ಪ್ರಸಾದ್ ರವರ ಪರಿಚಯವಿದೆ. ತಮ್ಮ ಹಳ್ಳಿ ಕೊತ್ತಗೆರೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ. ಆ.ಸ.ನೌ ರವರು ಸದರಿ ಗ್ರಾಮ ಪಂಚಾಯತಿಯ 2013-14ನೇ ಸಾಲಿನಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. 2013-14 ರ ಸಾಲಿನಲ್ಲಿ ತಮ್ಮ ಹಳ್ಳಿಗೆ 2 ರಸ್ತೆ ಅಭಿವೃದ್ಧಿ ಕಾಮಗಾರಿಗಳು ಮಂಜೂರಾಗಿದ್ದವು. ಅವುಗಳೆಂದರೆ, 1. ಗುನ್ನಾಗೆರೆ ಮುಖ್ಯರಸ್ತೆ ಯಿಂದ ತಿಪ್ಪಾಳದವರೆಗೆ 2. ಗುನ್ನಾಗೆರೆ ಮುಖ್ಯರಸ್ತೆ ಯಿಂದ ಜಿಯಾಸಾಬ್ ಈತನ ಮನೆಯವರೆಗೆ,

ಸದರಿ ಜೆಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗಳು ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಮಂಜೂರಾಗಿದ್ದವು. ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಆ.ಸ.ನೌ ರವರು ಅದೇ ವ್ಯಾಪ್ತಿಯಲ್ಲಿ ವಾಸಿಸುವ ಹಾಗೂ ಜಾಬ್‌ಕಾರ್ಡ್ ಹೊಂದಿದ ವ್ಯಕ್ತಿಗಳಿಂದ ಮಾಡಿಸಬೇಕಾಗಿತ್ತು. ಆದರೆ, ಸದರಿ ರಸ್ತೆ ಕಾಮಗಾರಿಗಳು ಸಮರ್ಪಕವಾಗಿ ಮಾಡಿರುವುದಿಲ್ಲ. ಕೆಲವೊಂದು ಕಡೆ ಸದರಿ ರಸ್ತೆಗಳಿಗೆ ಜೆಲ್ಲಿಯನ್ನು ಬಳಸದೆ ಕಳಪೆಮಟ್ಟದ ಕಾಮಗಾರಿ ಮಾಡಿರುತ್ತಾರೆ. ಜಾಬ್‌ಕಾರ್ಡ್‌ಗಳಲ್ಲಿ ಶಾಲಾ ಮಕ್ಕಳನ್ನು ಹಾಗೂ ಜಾಬಕಾರ್ಡ್ ಇಲ್ಲದಂತಹ ವ್ಯಕ್ತಿಗಳನ್ನು, ಜಾಬ್‌ಕಾರ್ಡ್ ಹೊಂದಿದಂತಹ ಕುಟುಂಬದ ಕಾರ್ಡ್‌ಗೆ ಬೇರೆ ವ್ಯಕ್ತಿಗಳನ್ನು ಸೇರಿಸಿಕೊಂಡು ಸುಳ್ಳು ಬಿಲ್ಲುಗಳನ್ನು ತಯಾರಿಸಿದ್ದಾರೆ. ಸದರಿ ಕಾಮಗಾರಿಯನ್ನು ಜನವರಿ ಹಾಗೂ ಫೆಬ್ರವರಿ ತಿಂಗಳುಗಳಲ್ಲಿ ಮಾಡಿದ್ದು, ಶಾಲಾ ಮಕ್ಕಳನ್ನು ಜಾಬ್‌ಕಾರ್ಡ್‌ನಲ್ಲಿ ಸೇರಿಸಿಕೊಂಡಿರುತ್ತಾರೆ. ಸದರಿ ದಿನಾಂಕಗಳಂದು ಶಾಲಾ ಮಕ್ಕಳು ತಮ್ಮ ಶಾಲೆಗಳಲ್ಲಿ ಹಾಜರಾಗಿದ್ದು, ಅವರ ಹೆಸರಿನಲ್ಲಿ ಸುಳ್ಳು ಜಾಬ್‌ಕಾರ್ಡ್ ಹಾಜರಾತಿ ತೋರಿಸಿ, ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ. ಶಾಲಾ ವಿದ್ಯಾರ್ಥಿಗಳನ್ನು ಈ ಕೆಲಸಕ್ಕೆ ತೆಗೆದುಕೊಳ್ಳಬಾರದು. ಉದ್ಯೋಗವಿಲ್ಲದ ವಯಸ್ಕರಿಗೆ ಈ ಅವಕಾಶ ಕೊಡಬೇಕಾಗುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

23. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಶಾಲಾ ಮಕ್ಕಳಾದ ಹೆಚ್.ಎಸ್.ಪವನ ತಂದೆ ಶಂಕರಪ್ಪ, ಹೆಚ್.ಎಸ್.ಪಲ್ಲವಿ ತಂದೆ ಶಂಕರಪ್ಪ, ತನುಜ.ವಿ ತಂದೆ ವೆಂಕಟೇಶ್, ಸ್ಫೂರ್ತಿ.ವಿ ತಂದೆ ವೆಂಕಟೇಶ್, ಮಧು. ಹೆಚ್.ವಿ ತಂದೆ ವೆಂಕಟೇಶ್, ನಾಗೇಶ್ ತಂದೆ ಸೀತಾರಾಮ್, ಸಂಗೀತ ತಂದೆ ರಾಮಸ್ವಾಮಿ. ಹೆಚ್.ಎಂ ಇವರುಗಳನ್ನು ಸಹ ಪಟ್ಟಿಯಲ್ಲಿ ತೋರಿಸಲಾಗಿದೆ. ಸಂಗೀತ ತಂದೆ ರಾಮಸ್ವಾಮಿ ಇವಳು ಅಪ್ರಾಪ್ತಳಿದ್ದು, ಅವಳ ವಯಸ್ಸನ್ನು 28 ಎಂದು ತೋರಿಸಲಾಗಿದೆ ಹಾಗೂ ಆಕೆಯ ತಂದೆಯ ವಯಸ್ಸು 35 ಹಾಗೂ ತಾಯಿಯ ವಯಸ್ಸು 30 ಎಂದು ತೋರಿಸಲಾಗಿದೆ. ಕುಟುಂಬ ಉದ್ಯೋಗ ಚೀಟಿ ಸಂಖ್ಯೆ: 820 ರಾಮಸ್ವಾಮಿ ಹೆಚ್.ಎಂ. ಇವರ ಕುಟುಂಬಕ್ಕೆ ಸೇರಿದ್ದು, ಅವರ ಕುಟುಂಬದಲ್ಲಿ ರಾಮಸ್ವಾಮಿ, ಅವರ ಹೆಂಡತಿ ರೇಖಾ ಹಾಗೂ ಮಗಳು ಸಂಗೀತ ಮಾತ್ರ ಇರುತ್ತಾರೆ. ಜಾಬ್‌ಕಾರ್ಡ್ ಇಲ್ಲದಂತ ವ್ಯಕ್ತಿಗಳು ಹಾಗೂ ಈ ಕುಟುಂಬಕ್ಕೆ ಸಂಬಂಧವಿಲ್ಲದಂತಹ ಶಿವರಾಜು, ರಂಗಪ್ಪ ಹಾಗೂ ಲಕ್ಷ್ಮಮ್ಮ ಎಂಬುವರ ಹೆಸರುಗಳನ್ನು ಸೃಷ್ಟಿಸಿ, ಹಣ ದುರುಪಯೋಗ

ಮಾಡಿಕೊಂಡಿದ್ದಾರೆ. ಇದೇ ರೀತಿ ಜಾಬ್‌ಕಾರ್ಡ್ ಸಂಖ್ಯೆ: 826, 780, 821, 822, 823, 825, 950, 550, 60, 22 ಗಳಲ್ಲಿ ಸಹ ನಕಲಿ ಹೆಸರುಗಳನ್ನು ಸೇರಿಸಿ ಅವ್ಯವಹಾರ ಮಾಡಿರುತ್ತಾರೆ. ಸದರಿ ನಕಲಿ ವ್ಯಕ್ತಿಗಳ ಹೆಸರಿನಲ್ಲಿ ಹಣವನ್ನು ಬಿಲ್ ಮಾಡಿ, ದುರುಪಯೋಗಪಡಿಸಿಕೊಂಡಿರುತ್ತಾರೆ. ಈ ರೀತಿ ಹಣ ದುರುಪಯೋಗಪಡಿಸಿಕೊಳ್ಳಲು ಪಿ.ಡಿ.ಓ ಆದಂತಹ ಆ.ಸ.ನೌ ರವರು ಹಾಗೂ ಚುನಾಯಿತ ಗ್ರಾಮ ಪಂಚಾಯತಿ ಅಧ್ಯಕ್ಷರಾದಂತಹ ಚಂದ್ರೇಗೌಡರವರು ಶಾಮೀಲಾಗಿರುತ್ತಾರೆ. ತಾನು ಈ ಬಗ್ಗೆ ದೂರನ್ನು ತುಮಕೂರು ಜಿಲ್ಲಾ ಪಂಚಾಯತಿಗೆ ಕೊಟ್ಟಿದ್ದು, ಅವರು ಮಹಾತ್ಮಾಗಾಂಧಿಯ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಒಂಬಡ್ಸ್‌ಮನ್ ರವರಿಗೆ ನೀಡಿದ್ದೇನೆ. ಆನಂತರ ಮಾನ್ಯ ಲೋಕಾಯುಕ್ತ ಕಚೇರಿಗೆ ದೂರನ್ನು ಸಲ್ಲಿಸಿದ್ದೇನೆ. ತಾನು ಕೊಟ್ಟಂತಹ ದೂರನ್ನು ನಿ.ಪಿ.1 ಎಂದು, ಪ್ರಪತ್ರ ಸಂಖ್ಯೆ:1 ಹಾಗೂ 2 ಗಳನ್ನು ನಿ.ಪಿ.2 ಹಾಗೂ 3 ಎಂದು ಗುರುತಿಸಿರುತ್ತಾರೆ. ಮಹಾತ್ಮಾಗಾಂಧಿಯ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಒಂಬಡ್ಸ್‌ಮನ್ ರವರು ನೀಡಿದ ವರದಿಯನ್ನು ನಿ.ಪಿ.4 ಎಂದು ಗುರುತಿಸಿರುತ್ತಾರೆ.

24. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ತಾನು ಮಾಹಿತಿ ಹಕ್ಕು ಅಧಿನಿಯಮದಡಿ ಪಡೆದಂತಹ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳೆಂದರೆ 1. ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿಯವರು ಕುಟುಂಬ ಸದಸ್ಯರ ಪಟ್ಟಿಯನ್ನು ನೀಡಿದ್ದು, ಅದನ್ನು ನಿ.ಪಿ.5 ಎಂದು ಗುರುತಿಸಿರುತ್ತಾರೆ. 2. ಶಾಲಾ ಮಕ್ಕಳ ಹಾಜರಾತಿ ಪುಸ್ತಕದ ದೃಢೀಕೃತ ನಕಲನ್ನು ನಿ.ಪಿ.6 (ಒಟ್ಟು 10 ಪುಟಗಳಿವೆ) ಎಂದು ಗುರುತಿಸಿರುತ್ತಾರೆ. ಈ ದಾಖಲಾತಿಯಲ್ಲಿ ಮೇಲೆ ವಿವರಿಸಿದ ಶಾಲಾ ಮಕ್ಕಳಾದ ಪಲ್ಲವಿ.ಹೆಚ್.ಎಸ್, ಪವನ್.ಹೆಚ್.ಎಸ್., ತನುಜ.ವಿ., ಶೃತಿ.ವಿ., ಮಧು. ಹೆಚ್.ವಿ., ಇವರ ಹಾಜರಾತಿ ಪುಸ್ತಕದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

25. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಜಾಬ್‌ಕಾರ್ಡ್‌ಗಳಲ್ಲಿ ನಕಲಿ ಹೆಸರುಗಳನ್ನು ತೋರಿಸಿದಂತಹ ಜಾಬಕಾರ್ಡ್ ಸಂಖ್ಯೆ: 826, 780, 821, 822, 823, 825, 950, 550, 60, 22 ಸಂಖ್ಯೆಯ ಜಾಬ್‌ಕಾರ್ಡ್‌ಗಳನ್ನು ಉಲ್ಲೇಖ ಪತ್ರದೊಂದಿಗೆ ಹಾಜರುಪಡಿಸಿದ್ದು, ಒಟ್ಟಾಗಿ

ನಿ.ಪಿ.7 ಎಂದು ಗುರುತಿಸಿರುತ್ತಾರೆ (ಒಟ್ಟು 14 ಪುಟಗಳು ಇರುತ್ತವೆ). ಈ ಎರಡು ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಾನು ಮಾಹಿತಿ ಹಕ್ಕು ಅಧಿನಿಯಮದಡಿ ಪಡೆದಂತಹ ದಾಖಲಾತಿಗಳನ್ನು ಉಲ್ಲೇಖ ಪತ್ರದೊಂದಿಗೆ ಹಾಜರುಪಡಿಸಿದ್ದು, ಒಟ್ಟಾಗಿ ನಿ.ಪಿ.8 ಎಂದು ಗುರುತಿಸಿರುತ್ತಾರೆ (ಒಟ್ಟು 95 ಪುಟಗಳು ಇರುತ್ತವೆ). ಈ ಎರಡು ಕಾಮಗಾರಿಗಳಲ್ಲಿ ಆ.ಸ.ನೌ ರವರು ಸುಮಾರು 7 ಲಕ್ಷದಷ್ಟು ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಒಂಬಡ್ಸ್‌ಮನ್ ರವರು ವರದಿ ತನ್ನ ದೂರಿಗೆ ಪೂರಕವಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

26. ಆ.ಸ.ನೌ ರವರ ಪರ ವಕೀಲರು ನಡೆಸಿದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ-1 ರವರು ತಾನು ವ್ಯವಸಾಯ ಮಾಡುತ್ತೇನೆ ಹಾಗೂ ಅದರೊಂದಿಗೆ ಎಲೆಕ್ಟ್ರಿಕಲ್ ಕೆಲಸ ಮಾಡುತ್ತೇನೆ. ತಾನು ಒಂದು ಸಾರಿ ಗ್ರಾಮಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಲು ಪ್ರಯತ್ನಿಸಿದ್ದೆ. ತನಗೆ ಬುದ್ಧಿ ಬಂದಾಗಿನಿಂದ ಗ್ರಾಮಪಂಚಾಯಿತಿ ಕೆಲಸಗಳನ್ನು ನೋಡುತ್ತಾ ಬಂದಿದ್ದೇನೆ. 2013 ಕ್ಕಿಂತ ಮುಂಚೆ ಕೊತ್ತಗೆರೆ ಗ್ರಾಮಪಂಚಾಯಿತಿಯ ಪಿ.ಡಿ.ಓ. ಯಾರಿದ್ದರೆಂಬುದು ತನಗೆ ನೆನಪಿಲ್ಲ. ಸದರಿ ಎರಡೂ ರಸ್ತೆಗಳ ಜೆಲ್ಲಿ ಕಾಮಗಾರಿ 2013 ಕ್ಕಿಂತ ಮುಂಚೆ ಸುಮಾರು 10 ವರ್ಷಗಳ ಹಿಂದೆ ಆಗಿತ್ತು. ಸದರಿ ಎರಡೂ ಕಾಮಗಾರಿಗಳಿಗೆ ಸಂಬಂಧಪಟ್ಟ ಅಭಿಯಂತರರ ಹೆಸರು ತನಗೆ ಗೊತ್ತಿಲ್ಲ. ಹೆಚ್.ಎಂ. ಪುಟ್ಟಣ್ಣಗೌಡ ತಮ್ಮ ಗ್ರಾಮದ ಒಬ್ಬ ಜಾಬ್‌ಕಾರ್ಡ್ ಇರುವಂತಹ ವ್ಯಕ್ತಿ. ಸದರಿ ಪುಟ್ಟಣ್ಣಗೌಡರು ಜಾಬ್‌ಕಾರ್ಡ್ ಇರುವಂತಹ ವ್ಯಕ್ತಿ ಅಲ್ಲ ಅಂದರೆ ಸರಿಯಲ್ಲ. ಅವರು ಕೇವಲ ಎರಡೂ ಕಾಮಗಾರಿಗಳ ಉಮೇದುವಾರಿಕೆ ನೋಡಿಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ. ಪಿ.ಡಿ.ಓ. ರವರು ಅಭಿಯಂತರರಿಗೆ ಜಾಬ್‌ಕಾರ್ಡ್‌ದಾರರ ಬಗ್ಗೆ ಮಾಹಿತಿ ಒದಗಿಸುತ್ತಾರೆ, ಗ್ರಾಮದ ಹಿರಿಯರು ಅಭಿಯಂತರರಿಗೆ ಜಾಬ್‌ಕಾರ್ಡ್‌ದಾರರ ಬಗ್ಗೆ ಮಾಹಿತಿ ಒದಗಿಸುತ್ತಾರೆ ಅಂದರೆ ಸರಿಯಲ್ಲ. ಪುಟ್ಟಣ್ಣಗೌಡರ ಮೇಲೂ ಸಹ ದೂರು ನೀಡಲು ತನಗೆ ಯಾವ ತೊಂದರೆಯೂ ಇರಲಿಲ್ಲ. ತಾಲ್ಲೂಕಾ ಕಾರ್ಯನಿರ್ವಾಹಕ ಅಧಿಕಾರಿಯವರು ಈ ಎರಡೂ ಕಾಮಗಾರಿಗಳ ಬಗ್ಗೆ ತನಿಖೆ ಮಾಡಿ, ವರದಿ ನೀಡಿದ್ದಾರೆ ಎಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

27. ಮುಂದುವರೆದ ಪಾಟೀ ಸವಾಲಿನಲ್ಲಿ ರಾಮಸ್ವಾಮಿ ಎಂಬುವರ ಜಾಬ್‌ಕಾರ್ಡ್ ಸಂಖ್ಯೆ: 820 ತಿರಸ್ಕೃತಗೊಂಡಿದೆ ಎಂದರೆ ಸರಿಯಲ್ಲ. ರಾಮಸ್ವಾಮಿಯವರಿಗೆ ದುಡ್ಡು ನೀಡಲಾಗಿದೆ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಂಗೀತ ಎಂಬುವರು ರಾಮಸ್ವಾಮಿಯವರ ಮಗಳು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪುಟ್ಟಣ್ಣಗೌಡರು ನೀಡಿದ ಮಾಹಿತಿ ಮೇರೆಗೆ ಈ ಎಲ್ಲಾ ಜಾಬ್‌ಕಾರ್ಡ್‌ಗಳನ್ನು ತಯಾರಿಸಲಾಗಿದೆ ಅಂದರೆ ಸರಿಯಲ್ಲ. ಆ.ಸ.ನೌ ರವರ ನಂತರ ಬಂದಂತಹ ಅಧಿಕಾರಿಗಳು ಸಹ ಅದೇ ಜಾಬ್‌ಕಾರ್ಡ್‌ಗಳ ಆಧಾರದ ಮೇಲೆ ಕಾಮಗಾರಿಗಳನ್ನು ಮಾಡಿಸುತ್ತಿದ್ದಾರೆ ಅಂದರೆ, ಆ ವಿಷಯ ತನಗೆ ಗೊತ್ತಿಲ್ಲ. 2014 ರ ನಂತರ ಸದರಿ ಜಾಬ್‌ಕಾರ್ಡ್‌ಗಳು ಇವೆಯೋ ಅಥವಾ ಇಲ್ಲವೋ ಎಂಬುದನ್ನು ತಾನು ವಿಚಾರಿಸಿಲ್ಲ. ತನಗೆ ಆ.ಸ.ನೌ ರವರ ಮೇಲೆ ದ್ವೇಷವಿದ್ದ ಕಾರಣ ಅವರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಕಾರಣಕ್ಕಾಗಿ ತಾನು ಮುಂದಿನ ವರ್ಷಗಳ ಜಾಬ್‌ಕಾರ್ಡ್‌ಗಳನ್ನು ಪರಿಶೀಲನೆ ಮಾಡಿಲ್ಲ ಅಂದರೆ ಸರಿಯಲ್ಲ. ಸದರಿ ಕಾಮಗಾರಿಗಳ ನಂತರ ಮತ್ತೆ ಅಲ್ಲಿ ಯಾವುದೇ ಕಾಮಗಾರಿ ಆಗಿರುವುದಿಲ್ಲ. ಅದೇ ರಸ್ತೆಗಳನ್ನು ಜನರು ಬಳಸುತ್ತಿದ್ದಾರೆ. ಒಂಬಡ್ಸಮನ್ ರವರ ಆದೇಶವನ್ನು ಆ.ಸ.ನೌ ರವರು ಮೇಲ್ಮನವಿಯಲ್ಲಿ ಪ್ರಶ್ನಿಸಿದ್ದು, ಅದನ್ನು ವಜಾ ಗೊಳಿಸಲಾಗಿದೆ ಅಂದರೆ ಅದು ತನಗೆ ಗೊತ್ತಿಲ್ಲ. ಆ.ಸ.ನೌ ರವರು ಯಾವುದೇ ತಪ್ಪು ಮಾಡದಿದ್ದರೂ ಸಹ ಅವರ ಮೇಲಿನ ದ್ವೇಷದಿಂದ ಸುಳ್ಳು ದೂರು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ತನ್ನ ದೂರಿನಲ್ಲಿ ನಮೂದಿಸಿದ ಜಾಬ್‌ಕಾರ್ಡ್‌ದಾರರಿಗೆ ಯಾವುದೇ ಹಣ ಪಾವತಿಯಾಗಿಲ್ಲ ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

28. ಪಿ.ಡಬ್ಲ್ಯೂ-2/ಶ್ರೀ. ರಾಮಚಂದ್ರ, ನಿವೃತ್ತ ನಿರ್ದೇಶಕರು, ಒಂಬಡ್ಸ್‌ಮನ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಆಗಸ್ಟ್ 2013 ರಿಂದ ಜೂನ್ 2016 ರವರೆಗೆ ಜಿಲ್ಲಾ ಪಂಚಾಯಿತಿ, ತುಮಕೂರಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಲ್ಲಿ ಓಂಬಡ್ಸ್‌ಮನ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ತನಗೆ ಆ.ಸ.ನೌ ರವರ ಪರಿಚಯವಿದೆ. ಆ.ಸ.ನೌ ರವರು ಕುಣಿಗಲ್ ತಾಲ್ಲೂಕು ಕೊತ್ತಗೆರೆ ಗ್ರಾಮ ಪಂಚಾಯಿತಿಯಲ್ಲಿ ಪಿ.ಡಿ.ಓ.ಆಗಿ ಸೇವೆ ಸಲ್ಲಿಸುತ್ತಿದ್ದರು. 2013-14 ನೇ ಸಾಲಿನಲ್ಲಿ

ಅವರ ವ್ಯಾಪ್ತಿಯಲ್ಲಿ ಎಂ.ಜಿ.ಎಸ್.ಆರ್.ಇ.ಜಿ.ಎ. ಯೋಜನೆಯಡಿ ಕೈಗೊಂಡ ವಿವಿಧ ಕಾಮಗಾರಿಗಳಲ್ಲಿ ಅಕ್ರಮ ಎಸಗಿರುವುದರ ಬಗ್ಗೆ ದೂರುಗಳು ಬಂದಿದ್ದು, ಈ ಬಗ್ಗೆ ತನಿಖೆ ಕೈಗೊಂಡಿರುತ್ತೇನೆ. ಗುನ್ನಾಗೆರೆ ರಸ್ತೆಯಿಂದ ತಿಪ್ಪಾಳದ ಜಿಯಾಸಾಬ್ ಮನೆಯವರೆಗೆ ಜೆಲ್ಲಿ ರಸ್ತೆ ಅಭಿವೃದ್ಧಿ ಮತ್ತು ಕೆ.ಹೊಸಹಳ್ಳಿ ಗ್ರಾಮದ ಗುನ್ನಾಗೆರೆಗೆ ಹೋಗುವ ಮುಸ್ಲಿಂ ಬೀದಿಯವರೆಗೆ ಇರುವ ರಸ್ತೆ ಅಭಿವೃದ್ಧಿ ಕೆಲಸಗಳನ್ನು ಮಾಡದೆ ನಕಲಿ ದಾಖಲಾತಿ ಸೃಷ್ಟಿಸಿ, ಮೊದಲ ಕಾಮಗಾರಿಯಿಂದ ರೂ.2,34,458/- ಮತ್ತು ಎರಡನೇ ಕಾಮಗಾರಿಯಿಂದ ರೂ.1,95,414/- ಆಗಿದ್ದು, ಅದನ್ನು ಡ್ರಾ ಮಾಡಲಾಗಿರುತ್ತದೆ. 3ನೇ ಪಕ್ಷಗಾರರ ವರದಿಯನ್ನು ಪಡೆದ ನಂತರ, ಸದರಿ ಹಣವನ್ನು ಡ್ರಾ ಮಾಡಬೇಕೆಂಬ ಆದೇಶವನ್ನು ಧಿಕ್ಕರಿಸಿ, ಹಣವನ್ನು ಡ್ರಾ ಮಾಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

29. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಎನ್.ಎಂ.ಆರ್ ಗಳಲ್ಲಿ ಶಾಲಾ ಮಕ್ಕಳು ಹಾಗೂ ಊರಿನಲ್ಲಿ ಇಲ್ಲದ ವ್ಯಕ್ತಿಗಳ ಹೆಸರುಗಳನ್ನು ನಮೂದಿಸಿ, ಕೂಲಿ ಹಣವನ್ನು ಡ್ರಾ ಮಾಡಲಾಗಿರುತ್ತದೆ. ಅದರ ಒಟ್ಟು ಮೊತ್ತ ರೂ.31,668/- ಹಾಗೂ ಒಟ್ಟು ದುರುಪಯೋಗ ಪಡಿಸಿಕೊಂಡ ಮೊತ್ತ ರೂ.4,29,874/- ಆಗಿರುತ್ತದೆ. ಸದರಿ ಮೊತ್ತದಲ್ಲಿ ಅರ್ಧ ಭಾಗದಷ್ಟು ಆ.ಸ.ನೌ ರವರು ದುರುಪಯೋಗ ಪಡಿಸಿಕೊಂಡಿರುವುದಾಗಿ ತಾನು ವರದಿ ನೀಡಿರುತ್ತೇನೆ ಹಾಗೂ ಸದರಿ ಮೊತ್ತವನ್ನು ಆ.ಸ.ನೌರವರಿಂದ ವಸೂಲು ಮಾಡುವಂತೆ, ಜಿಲ್ಲಾ ಪಂಚಾಯಿತಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಆದೇಶ ನೀಡಿರುತ್ತೇನೆ. ಸದರಿ ಆದೇಶವನ್ನು ನಿ.ಪಿ.4 ಎಂದು ಗುರುತಿಸಿರುತ್ತಾರೆ.

30. ಆ.ಸ.ನೌ ರವರ ಪರ ವಕೀಲರು ನಡೆಸಿದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ-2 ರವರು ತನಗೆ ಬಂದ ದೂರನ್ನು ಕಡತದಲ್ಲಿ ಅಳವಡಿಸಿಕೊಂಡಿದ್ದೇನೆ. ಆ.ಸ.ನೌ ರವರ ವಿರುದ್ಧ ಸುಮಾರು 2 ದೂರುಗಳು ಬಂದಿರಬಹುದು. ಆ.ಸ.ನೌ ರವರ ವಿರುದ್ಧ ಇನ್ನೊಂದು ದೂರಿನ ಕ್ರಮ ಸಂಖ್ಯೆ: 51/2013-14 ಆಗಿರುತ್ತದೆ. ದೂರು ಸಂಖ್ಯೆ: 51/2013-14 ನ್ನೂ ಕೂಡ ತಾನು ತನಿಖೆ

ಮಾಡಿದ್ದೇನೆ. ತಾನು ಪುಟ್ಟಣ್ಣೇಗೌಡ ರವರನ್ನು ಕರೆದು, ವಿಚಾರಣೆ ಮಾಡಿದ ಬಗ್ಗೆ ನೆನಪಿರುವುದಿಲ್ಲ. ಫಿರ್ಯಾದಿದಾರನನ್ನು ಹೊರತು ಪಡಿಸಿ, ಬೇರೆ ಸಾರ್ವಜನಿಕರು ತನಗೆ ದೂರು ನೀಡಿರುವುದಿಲ್ಲ. ತಾನು ಕಾಮಗಾರಿಗಳನ್ನು ಪರಿಶೀಲನೆ ಮಾಡಿದ್ದೇನೆ. ತಾನು ಜಿಲ್ಲಾ ಪಂಚಾಯಿತಿಗೆ ತನ್ನ ವರದಿಯಲ್ಲಿ ಸದರಿ ರೋಡಿನ ಗುಣಮಟ್ಟವನ್ನು ಪರಿಶೀಲನೆ ಮಾಡಲು ತಾಂತ್ರಿಕ ತಂಡಕ್ಕೆ ವಹಿಸಬೇಕೆಂದು ಕೇಳಿಕೊಂಡಿರುತ್ತೇನೆ. ಸದರಿ ತಾಂತ್ರಿಕ ತಂಡದವರು ಪರಿಶೀಲನೆ ಮಾಡಿ, ತನಗೆ ವರದಿಯನ್ನು ನೀಡಿರುವುದಿಲ್ಲ. ಅವರು ಜಿಲ್ಲಾ ಪಂಚಾಯಿತಿಗೆ ವರದಿಯನ್ನು ನೀಡಬೇಕಾಗುತ್ತದೆ. ತಾಂತ್ರಿಕ ತಂಡದವರು ಜಿಲ್ಲಾ ಪಂಚಾಯಿತಿಗೆ ವರದಿ ಮಾಡಿದ ಬಗ್ಗೆ ತಾನು ವಿಚಾರಿಸಿಲ್ಲ. ಫಿರ್ಯಾದಿದಾರ ನೀಡಿದಂತಹ ಜೆ಼ರಾಕ್ಸ್ ಪ್ರತಿಗಳನ್ನು ಮೂಲ ದಾಖಲೆಗಳೊಂದಿಗೆ ಹೋಲಿಸಿ ನೋಡಿರುವುದಿಲ್ಲ. ತಾನು ಆಂಜನಪ್ಪ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಶೈಲಜ ಹಾಗೂ ನಾಗರತ್ನ ಇವರ ಬಗ್ಗೆ ತನಗೆ ಗೊತ್ತಿಲ್ಲ. ತಾನು ಆಂಜನಪ್ಪ ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ತನ್ನ ಆದೇಶದಲ್ಲಿ ಸದರಿ ಕಾಮಗಾರಿಗಳನ್ನು ತಡೆ ಹಿಡಿಯಲು ದಿನಾಂಕ:28/03/2014 ರಂದು ಜಿಲ್ಲಾ ಪಂಚಾಯಿತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಹೇಳಿರುತ್ತೇನೆ. ಆದೇಶದ ಒಂದು ಪ್ರತಿಯನ್ನು ಪಿ.ಡಿ.ಓ ರವರಿಗೆ ನೀಡಿರುತ್ತೇನೆ. ತಾನು ಬಿಲ್ಲುಗಳನ್ನು ತಡೆ ಹಿಡಿಯಿರಿ ಎಂದು ಪಿ.ಡಿ.ಓ.ರವರಿಗೆ ಆದೇಶ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡ್ರಾ ಮಾಡಲಾದ ಹಣ ಕೂಲಿಯಾದರೆ ಕೂಲಿ ಕಾರ್ಮಿಕರ ಖಾತೆಗೆ ಹೋಗಿರುತ್ತದೆ ಹಾಗೂ ಸಾಮಗ್ರಿಗಳನ್ನು ಖರೀದಿಸುವುದಾದರೆ ಅದರ ಸರಬರಾಜುದಾರರ ಖಾತೆಗೆ ಹೋಗಿರುತ್ತದೆ. ಸದರಿ ಹಣವು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ನರೇಗಾ ಖಾತೆಯಿಂದ ಸಂಬಂಧಪಟ್ಟ ಕೂಲಿ ಕಾರ್ಮಿಕರಿಗೆ ಹಾಗೂ ಸಾಮಗ್ರಿಗಳನ್ನು ಸರಬರಾಜು ಮಾಡಿದವರ ಖಾತೆಗಳಿಗೆ ಜಮಾ ಆಗುತ್ತದೆ. ಆ.ಸ.ನೌ ರವರು ಯಾವ ದಿನ ಸದರಿ ಹಣವನ್ನು ಸಂಬಂಧಪಟ್ಟ ಖಾತೆಗಳಿಗೆ ಜಮೆ ಮಾಡಲು ಪಾಸ್ ಮಾಡಿದ್ದಾರೆ ಎಂಬುದು ತನಗೆ ನೆನಪಿರುವುದಿಲ್ಲ. ದಿನಾಂಕ:30/03/2014 ರಂದು ಕೊತ್ತಗೆರೆ ಗ್ರಾಮಪಂಚಾಯಿತಿಯಿಂದ ಚೌಡನಕುಪ್ಪೆ ಗ್ರಾಮಪಂಚಾಯಿತಿಗೆ ಆ.ಸ.ನೌ ರವರು ವರ್ಗಾವಣೆಯಾದ ಬಗ್ಗೆ ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

31. ಮುಂದುವರೆದ ಪಾಟೀ ಸವಾಲಿನಲ್ಲಿ ಆ.ಸ.ನೌ ರವರು ಕಾಮಗಾರಿ ಸಂಕೇತ ಆರ್.ಸಿ.992248711660 ಕ್ಕೆ ಒಟ್ಟು ರೂ.2.34.458/- ಮತ್ತು ಕಾಮಗಾರಿ ಆರ್.ಸಿ.992248711662 ಕ್ಕೆ ಒಟ್ಟು ರೂ.1.95.416/- ಗಳನ್ನು ಕಚೇರಿಯ ಆದೇಶವನ್ನು ಧಿಕ್ಕರಿಸಿ ಆ.ಸ.ನೌ ರವರು ನಗದೀಕರಿಸಿದ ಬಗ್ಗೆ ದಾಖಲಾತಿಗಳನ್ನು ಜಪ್ತಿ ಮಾಡಿಕೊಂಡಿದ್ದೀರಾ ಎಂಬ ಪ್ರಶ್ನೆಗೆ ತಾನು ಸದರಿ ದಾಖಲಾತಿಗಳನ್ನು ಆನ್-ಲೈನ್‌ನಲ್ಲಿ ಪರಿಶೀಲಿಸಿದ್ದೇನೆ. ತಾನು ಯಾವುದೇ ದಾಖಲಾತಿಗಳನ್ನು ವಶಪಡಿಸಿಕೊಂಡಿಲ್ಲ ಎಂದು ಉತ್ತರಿಸಿದ್ದಾರೆ. ಜಾಬ್ ಕಾರ್ಡ್‌ಗಳು ಆ.ಸ.ನೌ ರವರ ಅವಧಿಯಲ್ಲಿ ಅಥವಾ ಅವರ ಹಿಂದಿನ ಪಿ.ಡಿ.ಓ ರವರ ಅವಧಿಯಲ್ಲಿ ಆಗಿದೆಯಾ ಎಂಬುದನ್ನು ನೀವು ಪರಿಶೀಲಿಸಿದ್ದೀರಾ ಎಂಬ ಪ್ರಶ್ನೆಗೆ ಆ ಬಗ್ಗೆ ತನಗೆ ಮಾಹಿತಿಯಿಲ್ಲ ಎಂದು ಉತ್ತರಿಸಿರುತ್ತಾರೆ. ತಾನು ಜಾಬ್ ಕಾರ್ಡ್‌ಗಳನ್ನು ಪರಿಶೀಲಿಸಿದ ಬಗ್ಗೆ ನೆನಪಿರುವುದಿಲ್ಲ. ಕೂಲಿಕಾರರ ಅರ್ಜಿಗಳನ್ನು ತಾನು ಪರಿಶೀಲಿಸಿಲ್ಲ. ಕೆಲಸದ ಗುಣಮಟ್ಟ ಹಾಗೂ ಕೂಲಿ ಕಾರ್ಮಿಕರನ್ನು ನೋಡಿಕೊಳ್ಳುವ ಕೆಲಸವನ್ನು ಸಹಾಯಕ ಅಭಿಯಂತರರು ನೋಡಿಕೊಳ್ಳುತ್ತಾರೆ ಅನ್ನೋದು ನಿಜ. ಎಷ್ಟು ಜನ ಕೂಲಿ ಕಾರ್ಮಿಕರು ಕೆಲಸ ಮಾಡಿದ್ದಾರೆ ಎಂಬುದನ್ನು ಸಹಾಯಕ ಅಭಿಯಂತರರು ನೋಡಿಕೊಳ್ಳುತ್ತಾರೆ ಅನ್ನೋದು ನಿಜ ಎಂದು ಸಾಕ್ಷ್ಯ ನುಡಿದಿರುತ್ತಾರೆ.

32. ಮುಂದುವರೆದ ಪಾಟೀ ಸವಾಲಿನಲ್ಲಿ ಸಹಾಯಕ ಅಭಿಯಂತರರು ನೀಡುವ ಬಿಲ್ಲುಗಳ ಆಧಾರದ ಮೇಲೆ ಪಿ.ಡಿ.ಓ.ರವರು ಹಣವನ್ನು ಮಂಜೂರು ಮಾಡುತ್ತಾರೆ ಅನ್ನೋದು ನಿಜ. ನಿ.ಪಿ.8ರ ಎಂ.ಬಿ.ಪುಸ್ತಕದಲ್ಲಿ ಕೆ.ಹೊಸಹಳ್ಳಿ ಗ್ರಾಮದ ಗುನ್ನಾಗೆರೆ ರಸ್ತೆಯಿಂದ ಹಿಪ್ಪಾಳದ ಜಿಯಾಸಾಬ್ ಮನೆಯವರೆಗೆ ಜಲ್ಲಿ ರಸ್ತೆ ಕಾಮಗಾರಿ ಸಂಕೇತ ಆರ್.ಸಿ/992248711660 ಯನ್ನು ಪೂರ್ಣಗೊಳಿಸಿದ ತಾಂತ್ರಿಕ ಸಹಾಯಕರ ಹೆಸರು ಪುಟ್ಟರಾಜು ಹಾಗೂ ಕಾಮಗಾರಿ ಪೂರ್ಣಗೊಳಿಸಿದ ಅಧಿಕಾರಿಯ ಹೆಸರು ರಾಘವೇಂದ್ರ ಎನ್ನುವುದು ಸರಿ. ತಾನು ಈ ಮೇಲೆ ಹೇಳಿದ ಅಧಿಕಾರಿಗಳನ್ನು ವಿಚಾರಣೆ ಮಾಡಿರುವುದಿಲ್ಲ. ಕಾಮಗಾರಿ ಸಂಕೇತ ಆರ್.ಸಿ./992248711662 ಯನ್ನು ಸಹ ಈ ಮೇಲೆ ಹೇಳಿದ ಅಧಿಕಾರಿಗಳೇ ಮಾಡಿರುತ್ತಾರೆ ಅನ್ನೋದು ನಿಜ. ಅಂದಾಜು ಪಟ್ಟಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು ತಯಾರಿಸಿದ್ದಾರೆ ಅನ್ನೋದು ನಿಜ.

ಕಾರ್ಮಿಕರ ಹಾಜರಾತಿಯನ್ನು ಕಿರಿಯ ಅಭಿಯಂತರರು ನೋಡಿಕೊಳ್ಳುತ್ತಾರೆ ಅನ್ನೋದು ನಿಜ. ಕಾರ್ಮಿಕರ ಹಾಜರಾತಿಯ ಒಟ್ಟು ಮೊತ್ತವನ್ನು ಲೆಕ್ಕಹಾಕಿ, ಕಿರಿಯ ಅಭಿಯಂತರರು ಪಿ.ಡಿ.ಓ.ರವರಿಗೆ ಸಲ್ಲಿಸುತ್ತಾರೆ ಅನ್ನೋದು ನಿಜ. ತನ್ನ ವರದಿಯ ಟೇಬಲ್ 2 ರಲ್ಲಿಯ ಕ್ರಮ ಸಂಖ್ಯೆ:5, 6, 7 ಜಾಬ್‌ಕಾರ್ಡ್‌ಗಳಿಗೆ ಹಣ ಸಂದಾಯವಾಗದೇ ಅವುಗಳು ತಿರಸ್ಕೃತಗೊಂಡಿವೆ ಅಂದರೆ ಸರಿಯಲ್ಲ. ತಾನು ಈ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸದೇ ಸುಳ್ಳು ವರದಿ ನೀಡಿದ್ದೇನೆ ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

33. ಮುಂದುವರೆದ ಪಾಟೀ ಸವಾಲಿನಲ್ಲಿ ತನ್ನ ವರದಿಯ ಟೇಬಲ್ 2 ರಲ್ಲಿ ಕ್ರ.ಸಂ.1 ರಿಂದ 16 ರವರೆಗೆ ಇರುವ ಬೋಗಸ್ ಹೆಸರುಗಳಿಗೆ ಹಣ ಸಂದಾಯವಾದ ಬಗ್ಗೆ, ಜಾಬ್ ಕಾರ್ಡ್ ಹಾಗೂ ಆನ್-ಲೈನ್‌ನಲ್ಲಿ ಸಿಗುವ ಮಾಹಿತಿ ಪ್ರಕಾರ ತಾನು ವರದಿಯಲ್ಲಿ ನಮೂದಿಸಿದ್ದೇನೆ. ಆನ್-ಲೈನ್ ಎನ್‌ಎಂಆರ್ ಸ್ಟೇಟ್ಮೆಂಟ್ ತನ್ನ ವರದಿಯ ಪುಟ ಸಂಖ್ಯೆ: 71 ರಿಂದ 73, 77, 78, 81, 82, 85, 86 ರಲ್ಲಿ ಇರುತ್ತದೆ. ಟೇಬಲ್ ನಂ.2ನಲ್ಲಿ ಇರುವಂತಹ 16 ಹೆಸರುಗಳು ಆನ್-ಲೈನ್ ಸ್ಟೇಟ್ಮೆಂಟ್‌ನಲ್ಲಿ ಇರುವುದಿಲ್ಲ ಎಂಬ ಪ್ರಶ್ನೆಗೆ ಬಹುಶ: ಅದರಲ್ಲಿ ಟೈಪಿಂಗ್ ಮಿಸ್ಟೇಕ್ ಆಗಿರಬಹುದು ಎಂದು ಉತ್ತರಿಸಿರುತ್ತಾರೆ. ತಾನು ತನ್ನ ವರದಿಯ ಟೇಬಲ್ ನಂ.2ನ್ನು ಯಾವುದೇ ದಾಖಲಾತಿಗಳ ಆಧಾರವಿಲ್ಲದೆ, ತನ್ನ ಮನಸ್ಸಿಗೆ ಬಂದ ಹಾಗೆ ತಯಾರಿಸಿದ್ದೇನೆ ಅಂದರೆ ಸರಿಯಲ್ಲ. ತಾನು ಟೇಬಲ್ ನಂ.2 ರಲ್ಲಿ ತೋರಿಸಿದ 16 ಜನರಿಗೆ ಯಾವುದೇ ಹಣ ಸಂದಾಯವಾಗಿಲ್ಲ ಹಾಗೂ ತಾನು ಸುಳ್ಳು ವರದಿ ನೀಡಿದ್ದೇನೆ ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

34. ಮುಂದುವರೆದ ಪಾಟೀ ಸವಾಲಿನಲ್ಲಿ ನರೇಗಾ ನಿಯಮಗಳ ಪ್ರಕಾರ ಪ್ರತಿ ದಿನದ ಕೆಲಸದ ಪರಿಶೀಲನೆ ಮಾಡುವ ಜವಾಬ್ದಾರಿ ಹಾಗೂ ಕೂಲಿ ಕಾರ್ಮಿಕರ ಹಾಜರಾತಿ ಪಡೆಯುವ ಕೆಲಸ ಕಿರಿಯ ಅಭಿಯಂತರರದ್ದು ಅನ್ನೋದು ನಿಜ. ಒಬ್ಬ ಕೂಲಿ ಕಾರ್ಮಿಕನಿಗೆ ಎಷ್ಟು ಕೂಲಿ ಸಂದಾಯವಾಗಬೇಕೆಂಬುದನ್ನು ಕಿರಿಯ ಅಭಿಯಂತರರು ನಿರ್ಧರಿಸುತ್ತಾರೆ ಅನ್ನೋದು ನಿಜ. ತನಿಖೆ ಸಮಯದಲ್ಲಿ ಕಿರಿಯ ಅಭಿಯಂತರರ ವಿರುದ್ಧ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ

ಎಂಬ ಪ್ರಶ್ನೆಗೆ ತಾನು ತನಿಖೆ ಪ್ರಾರಂಭಿಸುವಾಗ ಅವರಿಗೂ ಸಹ ನೋಟೀಸ್ ನೀಡಿದ್ದೆ. ಆದರೆ ಅವರು ಹಾಜರಾಗಿರುವುದಿಲ್ಲ. ತಾನು ಕಿರಿಯ ಅಭಿಯಂತರರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವರದಿ ನೀಡಿಲ್ಲ. ಆದರೆ, ಆ.ಸ.ನೌ ರವರು ಕಿರಿಯ ಅಭಿಯಂತರ ರವರ ಶಿಫಾರಸ್ಸಿನ ಮೇಲೆ ಹಣ ಡ್ರಾ ಮಾಡಿರುತ್ತಾರೆ. ಆ.ಸ.ನೌ ರವರು ಹಣ ಡ್ರಾ ಮಾಡಿದ ಬಗ್ಗೆ ತಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಆ.ಸ.ನೌ ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ತಾನು ಸುಳ್ಳು ವರದಿ ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

35. ಆ.ಸ.ನೌ ರವರು ಡಿ.ಡಬ್ಲ್ಯೂ-1 ರವರಂತೆ ಸಾಕ್ಷ್ಯ ನುಡಿದಿರುತ್ತಾರೆ. ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಆ.ಸ.ನೌ ರವರು ದೋಷಾರೋಪಣೆಯಲ್ಲಿ ಮಾಡಿದ ಆಪಾದನೆಯ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ. ಮುಂದುವರೆದು, ಈ ಪ್ರಕರಣದಲ್ಲಿಯ ಆಪಾದನೆಗಳ ಕುರಿತಂತೆ ದೂರುದಾರರು ತನ್ನ ಮೇಲೆ ಒಂಬಡ್ಸ್‌ಮನ್ ರವರಿಗೆ ದೂರನ್ನು ಸಲ್ಲಿಸಿದ್ದರೂ ಅದು ಪ್ರಕರಣ ಸಂಖ್ಯೆ. 32/2014-15 ರಲ್ಲಿ ದಾಖಲಾಗಿ ಓಂಬಡ್ಸ್ ಮನ್ ರವರು ದಿ:21/10/2014 ರಂದು ತನ್ನ ವಿರುದ್ಧ ಹಾಗೂ ಗ್ರಾಮ ಪಂಚಾಯತಿ ಅಧ್ಯಕ್ಷರ ವಿರುದ್ಧ ಆದೇಶ ಮಾಡಿ ಒಟ್ಟು ರೂ.4,29,874/- ರೂಗಳನ್ನು ವಸೂಲು ಮಾಡಬೇಕೆಂದು ಆ ಪೈಕಿ ತನ್ನಿಂದ 2,14,937/- ರೂಗಳನ್ನು ಹಾಗೂ 31,668/- ರೂಗಳ ಪೈಕಿ ತನ್ನಿಂದ 12,668/- ಹಣವನ್ನು ವಸೂಲು ಮಾಡಬೇಕೆಂದು ಆದೇಶ ಮಾಡಿದ್ದು, ಅದರ ವಿರುದ್ಧ ತಾನು ಕರ್ನಾಟಕ ಒಂಬಡ್ಸ್‌ಮನ್ ಅಪೀಲು ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಮೇಲ್ಮನವಿ ಪ್ರಾಧಿಕಾರವು ಒಂಬಡ್ಸ್‌ಮನ್ ರವರ ಈ ಮೇಲೆ ಹೇಳಿದ ಆದೇಶವನ್ನು ದಿ:2/6/2015 ರಲ್ಲಿ ರದ್ದುಪಡಿಸಿರುತ್ತಾರೆ. ದೂರುದಾರರು ತನ್ನ ಮೇಲೆ ಸುಳ್ಳು ದೂರನ್ನು ದಾಖಲಿಸಿದ್ದು, ಒಂಬಡ್ಸ್‌ಮನ್ ರವರು ಸಹ ಸತ್ಯಾಸತ್ಯತೆಯನ್ನು ತಿಳಿಯದೇ ಆದೇಶ ಮಾಡಿದರು. ತನ್ನ ರಜಾ ಅವಧಿಯಲ್ಲಿ ಕೂಲಿ ಕಾರ್ಮಿಕರಿಗೆ ಹಣ ಸಂದಾಯ ಮಾಡಲಾಗಿದೆ. ತಾನು ಹಣ ಸಂದಾಯ ಮಾಡಿಲ್ಲ. ಜಾಬ್ ಕಾರ್ಡ್‌ಗಳನ್ನು ಅರ್ಜಿದಾರರು ನೀಡಿದ ಮಾಹಿತಿ ಮೇರೆಗೆ ತಾನು ಬರುವುದಕ್ಕಿಂತ ಮೊದಲೇ ತಯಾರಿಸಿದವು ಆಗಿರುತ್ತವೆ. ಜಾಬ್

ಕಾರ್ಡ್‌ಗಳನ್ನು ಪರಿಶೀಲಿಸುವುದು ತಾಂತ್ರಿಕ ಸಹಾಯಕರ ಕೆಲಸವಾಗಿರುತ್ತದೆ. ಅದು ತನ್ನ ಕೆಲಸವಲ್ಲ. ಈ ಎಲ್ಲಾ ಅಂಶಗಳನ್ನು ಪರಿಗಣಿಸದೇ ಒಂಬಡ್ಸ್‌ಮನ್ ಆದೇಶ ಮಾಡಿದ್ದರು. ಕಾಮಗಾರಿ ಕೆಲಸದಲ್ಲಿ ಅದರ ಗುಣಮಟ್ಟವನ್ನು ಪರಿಶೀಲಿಸುವುದು ತಾಂತ್ರಿಕ ಇಂಜಿನಿಯರ್ ಗಳ ಕೆಲಸವಾಗಿದ್ದು. ಅವರು ಎಂ.ಬಿ ಪುಸ್ತಕ ಬರೆದು ಹಣ ಸಂದಾಯ ಮಾಡಲು ಶಿಫಾರಸ್ಸು ಮಾಡಿದ ನಂತರ ಕೂಲಿಕಾರರ ಖಾತೆಗೆ ಹಣ ಸಂದಾಯ ಮಾಡುವುದು ತನ್ನ ಕೆಲಸವಾಗಿರುತ್ತದೆ ಒಂಬಡ್ಸ್ ಮನ್ ರವರು ನರೇಗಾದಲ್ಲಿಯ ನಿಯಮಾವಳಿಗಳನ್ನು ಅವಲೋಕಿಸದೇ ಹಾಗೂ ತನಗೆ ಸಂಪೂರ್ಣ ಅವಕಾಶವನ್ನು ನೀಡದೇ ಆದೇಶ ಮಾಡಿರುತ್ತಾರೆ. ತಾನು ಯಾವುದೇ ಅವ್ಯವಹಾರ ಮಾಡಿರುವುದಿಲ್ಲ ಹಾಗೂ ದುರ್ನಡತೆ ಎಸಗಿರುವುದಿಲ್ಲ ಹಾಗೂ ತನ್ನನ್ನು ದೋಷಾರೋಪಣೆಯಿಂದ ಮುಕ್ತಗೊಳಿಸಬೇಕೆಂದು ಕೋರಿಕೊಂಡು ದಿ:21/10/2014 ರ ಒಂಬಡ್ಸ್‌ಮನ್ ರವರ ಆದೇಶದ ಪ್ರತಿಯನ್ನು, ದಿ:2/6/2015 ರಂದು ಒಂಬಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಆದೇಶದ ಪ್ರತಿಯನ್ನು, ಮಾರ್ಚ್ ಹಾಗೂ ಏಪ್ರಿಲ್ 2014 ರ ಹಾಜರಾತಿ ಪುಸ್ತಕದ ನಕಲುಗಳನ್ನು ಹಾಗೂ ದಿ:18/3/2014 ರ ತಾಲ್ಲೂಕಾ ಪಂಚಾಯತಿ ಕಾರ್ಯಾಲಯದ ಅಧಿಕೃತ ಜ್ಞಾಪನ ಪತ್ರವನ್ನು ಹಾಜರುಪಡಿಸಿರುತ್ತಾರೆ ಹಾಗೂ ಅವುಗಳನ್ನು ಕ್ರಮವಾಗಿ ನಿ.ಡಿ-1 ರಿಂದ 5 ಎಂದು ಗುರುತಿಸಲಾಗಿದೆ. ಅದೂ ಅಲ್ಲದೇ ಚೌಡನಕುಪ್ಪೆ ಗ್ರಾಮ ಪಂಚಾಯತಿ ಏಪ್ರಿಲ್ 2014 ರಿಂದ ಡಿಸೆಂಬರ್ 2014 ರವರೆಗಿನ ಹಾಜರಾತಿ ಪುಸ್ತಕದ ದೃಢೀಕರಿಸಿದ ನಕಲನ್ನು, ದಿ:27/1/2014 ರಿಂದ 2/2/2014 ರ ಎಂ.ಬಿ ಪುಸ್ತಕದ ಪ್ರತಿ ಯನ್ನು ಹಾಗೂ 11/1/2014 ರಿಂದ 17/1/2014 ರ ಎಂ.ಬಿ ಪುಸ್ತಕದ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಡಿ-6 ರಿಂದ 8 ಎಂದು ಗುರುತಿಸಲಾಗಿದೆ. ಪಾಟೀ ಸವಾಲಿನಲ್ಲಿ ಈ ಸಾಕ್ಷಿದಾರರು ಒಂಬಡ್ಸ್‌ಮನ್ ರವರು ದಿ:29/10/2014 ರಂದು ಸ್ಥಳಕ್ಕೆ ಭೇಟಿ ಸ್ಥಳ ಪರಿಶೀಲಿಸಿ ವರದಿ ಸಲ್ಲಿಸಿದ ಬಗ್ಗೆ ಮತ್ತು ಸದರಿ ವರದಿಯಲ್ಲಿ ಕಾಮಗಾರಿಗಳಲ್ಲಿ ಅಕ್ರಮ ಎಸಗಿರುತ್ತಾರೆಂದು ವರದಿ ಮಾಡಲಾಗಿತ್ತು ಎನ್ನುವುದನ್ನು ಸಹ ಒಪ್ಪಿಕೊಂಡಿರುತ್ತಾರೆ.

36. ಈ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ-1 ದೂರುದಾರರ ಶ್ರೀ. ಶಂಕರಲಿಂಗೇಗೌಡ ಹೆಚ್.ಬಿ ರವರನ್ನು ಪಿ.ಡಬ್ಲ್ಯೂ-1. ಶ್ರೀ. ರಾಮಚಂದ್ರ ಒಂಬಡ್ಸ್‌ಮನ್ ರವರನ್ನು ಪಿ.ಡಬ್ಲ್ಯೂ-2 ಇವರ ಹೇಳಿಕೆಗಳನ್ನು ಹಾಗೂ ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುವ ನಿ.ಪಿ-1 ರಿಂದ 8 ರವರೆಗಿನ ದಾಖಲಾತಿಗಳನ್ನು ಪರಿಶೀಲಿಸಲಾಯಿತು ಮತ್ತು ಆ.ಸ.ನೌ ರವರು ನೀಡಿದ ಸಾಕ್ಷ್ಯವನ್ನು ಹಾಗೂ ಹಾಜರುಪಡಿಸಿದ ನಿ.ಡಿ-1 ರಿಂದ 8 ದಾಖಲೆಗಳನ್ನು ಪರಿಶೀಲಿಸಲಾಯಿತು.

37. ಈ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಶ್ರೀ. ಶಂಕರಲಿಂಗೇಗೌಡ ಹೆಚ್.ಬಿ ರವರನ್ನು ಪಿ.ಡಬ್ಲ್ಯೂ-1 ಎಂದು. ಶ್ರೀ. ರಾಮಚಂದ್ರ ಒಂಬಡ್ಸ್‌ಮನ್ ರವರನ್ನು ಪಿ.ಡಬ್ಲ್ಯೂ-2 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-8 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಗುರುತಿಸಿಕೊಳ್ಳಲಾದ ದಾಖಲೆಗಳಲ್ಲಿ ನಿ.ಪಿ-1 ದೂರು ಆಗಿದ್ದು. ನಿ.ಪಿ-2 ಪ್ರಪತ್ರ-1. ನಿ.ಪಿ-3 ಪ್ರಪತ್ರ-2. ನಿ.ಪಿ-4 ಒಂಬಡ್ಸ್‌ಮನ್ ವರದಿ. ನಿ.ಪಿ-5 ದೂರುದಾರರು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿರುವ ಮಾಹಿತಿಗಳು. ನಿ.ಪಿ-6 ಶಾಲಾ ಮಕ್ಕಳ ಹಾಜರಾತಿ ಪುಸ್ತಕದ ದೃಢೀಕೃತ ನಕಲುಗಳು. ನಿ.ಪಿ-7 ಜಾಬ್ ಕಾರ್ಡ್‌ಗಳಲ್ಲಿ ನಮೂದಿಸಿರುವ ಹೆಸರುಗಳು. ನಿ.ಪಿ-8 ಮಾಹಿತಿ ಹಕ್ಕು ಅಧಿನಿಮಯದಡಿ ಪಡೆದಂತಹ ದಾಖಲಾತಿಗಳು ಆಗಿರುತ್ತವೆ.

38. ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿ-1 ದೂರುದಾರರು ತಮ್ಮ ಹೇಳಿಕೆಯಲ್ಲಿ 2013-14 ನೇ ಸಾಲಿನಲ್ಲಿ ಕೊತ್ತಗೆರೆ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಕೆ. ಹೊಸಹಳ್ಳಿ ಗ್ರಾಮದ ಗುನ್ನಾಗೆರೆ ಮುಖ್ಯ ರಸ್ತೆಯಿಂದ ತಿಪ್ಪಾಳದವರೆಗೆ ಮತ್ತು ಗುನ್ನಾಗೆರೆ ಮುಖ್ಯರಸ್ತೆಯಿಂದ ಜಿಯಾಸಾಬ್ ರವರ ಮನೆಯವರೆಗೆ ಜಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗಳು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಮಂಜೂರಾಗಿದ್ದವು. ಆ.ಸ.ನೌ ರವರು ಅದೇ ವ್ಯಾಪ್ತಿಯಲ್ಲಿ ವಾಸಿಸುವ ಹಾಗೂ ಜಾಬ್ ಕಾರ್ಡ್ ಹೊಂದಿದ ವ್ಯಕ್ತಿಗಳಿಂದ

ಕಾಮಗಾರಿ ಮಾಡಿಸಬೇಕಾಗಿತ್ತು. ಆದರೆ ಸದರಿ ರಸ್ತೆ ಕಾಮಗಾರಿಗಳನ್ನು ಸಮರ್ಪಕವಾಗಿ ಮಾಡಿರುವುದಿಲ್ಲ ಕೆಲವೊಂದು ಕಡೆ ಸದರಿ ರಸ್ತೆಗಳಿಗೆ ಜಲ್ಲಿಯನ್ನು ಬಳಸದೇ ಕಳಪೆ ಮಟ್ಟದ ಕಾಮಗಾರಿ ಮಾಡಿರುತ್ತಾರೆ. ಜಾಬ್ ಕಾರ್ಡ್‌ಗಳಲ್ಲಿ ಶಾಲಾ ಮಕ್ಕಳನ್ನು ಹಾಗೂ ಜಾಬ್ ಕಾರ್ಡ್ ಇಲ್ಲದಂತ ಮಕ್ಕಳನ್ನು ಹಾಗೂ ಜಾಬ್ ಕಾರ್ಡ್ ಹೊಂದಿದಂತಹ ಕುಟುಂಬದ ಕಾರ್ಡಿಗೆ ಬೇರೆ ವ್ಯಕ್ತಿಗಳನ್ನು ಸೇರಿಸಿಕೊಂಡು ಸುಳ್ಳು ಬಿಲ್ಲುಗಳನ್ನು ತಯಾರಿಸಿದ್ದಾರೆ. ಸದರಿ ಕಾಮಗಾರಿಯನ್ನು ಜನವರಿ ಹಾಗೂ ಫೆಬ್ರವರಿ ತಿಂಗಳನಲ್ಲಿ ಮಾಡಿದ್ದು, ಶಾಲಾ ಮಕ್ಕಳನ್ನು ಜಾಬ್ ಕಾರ್ಡ್‌ನಲ್ಲಿ ಸೇರಿಸಿಕೊಂಡಿರುತ್ತಾರೆ. ಸದರಿ ದಿನಾಂಕಗಳಂದು ಶಾಲಾ ಮಕ್ಕಳು ತಮ್ಮ ಶಾಲೆಗಳಲ್ಲಿ ಹಾಜರಾಗಿದ್ದು, ಅವರ ಹೆಸರಿನಲ್ಲಿ ಸುಳ್ಳು ಜಾಬ್ ಕಾರ್ಡ್ ಹಾಜರಾತಿ ತೋರಿಸಿ, ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ. ಶಾಲಾ ಮಕ್ಕಳಾದ ಹೆಚ್ ಎಸ್. ಪವನ್ ತಂದೆ ಶಂಕರಪ್ಪ, ಹೆಚ್.ಎಸ್. ಪಲ್ಲವಿ ತಂದೆ ಶಂಕರಪ್ಪ, ತನುಜ ತಂದೆ ವೆಂಕಟೇಶ್, ಸ್ಫೂರ್ತಿ.ವಿ ತಂದೆ ವೆಂಕಟೇಶ್, ಮಧು ಹೆಚ್.ವಿ ತಂದೆ ವೆಂಕಟೇಶ್, ನಾಗೇಶ್ ತಂದೆ ಸೀತಾರಾಮ್, ಸಂಗೀತ ತಂದೆ ರಾಮಸ್ವಾಮಿ ಹೆಚ್. ಎಂ. ಇವರುಗಳನ್ನು ಸಹ ಪಟ್ಟಿಯಲ್ಲಿ ತೋರಿಸಲಾಗಿದೆ. ಸಂಗೀತಾ ಇವಳು ಅಪ್ರಾಪ್ತಳಾಗಿದ್ದು, ಅವಳ ವಯಸ್ಸನ್ನು 28 ಎಂದು ತೋರಿಸಲಾಗಿದೆ ಹಾಗೂ ಆಕೆಯ ತಂದೆಯ ವಯಸ್ಸು 35 ಹಾಗೂ ತಾಯಿಯ ವಯಸ್ಸು 30 ಎಂದು ತೋರಿಸಲಾಗಿದೆ. ಕುಟುಂಬ ಉದ್ಯೋಗ ಚೀಟಿ ಸಂಖ್ಯೆ.820 ರಾಮಸ್ವಾಮಿ ಹೆಚ್. ಎಂ ಇವರ ಕುಟುಂಬಕ್ಕೆ ಸೇರಿಸಿದ್ದು, ಅವರ ಕುಟುಂಬದಲ್ಲಿ ರಾಮಸ್ವಾಮಿ, ಅವರ ಹೆಂಡತಿ ರೇಖಾ ಹಾಗೂ ಮಗಳು ಸಂಗೀತಾ ಮಾತ್ರ ಇರುತ್ತಾರೆ. ಜಾಬ್ ಕಾರ್ಡ್ ಇಲ್ಲದಂತ ವ್ಯಕ್ತಿಗಳು ಹಾಗೂ ಈ ಕುಟುಂಬಕ್ಕೆ ಸಂಬಂಧವಿಲ್ಲದಂತಹ ಶಿವರಾಜು, ರಂಗಪ್ಪ ಹಾಗೂ ಲಕ್ಷ್ಮಮ್ಮ ಎನ್ನುವವರನ್ನು ಸೃಷ್ಟಿಸಿ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಇದೇ ರೀತಿ ಜಾಬ್ ಕಾರ್ಡ್ ಸಂಖ್ಯೆ. 826, 780, 821, 822, 823, 825, 950, 550, 60, 22 ಗಳಲ್ಲಿ ಸಹ ಸಕಲಿ ಹೆಸರುಗಳನ್ನು ಸೇರಿಸಿ ಅವ್ಯವಹಾರ ಮಾಡಿ ಸದರಿ ನಕಲಿ ವ್ಯಕ್ತಿಗಳ ಹೆಸರುಗಳಲ್ಲಿ ಹಣವನ್ನು ಬಿಲ್ ಮಾಡಿ ದುರುಪಯೋಗಪಡಿಸಿಕೊಂಡಿರುತ್ತಾರೆ. ಈ ರೀತಿ ಹಣ ದುರುಪಯೋಗ ಪಡಿಸಿಕೊಳ್ಳಲು ಆ.ಸ.ನಾ ರವರು ಕಾರಣರಾಗಿದ್ದು, ಅವರ ಮೇಲೆ ನಿ.ಪಿ-1 ರಂತೆ ದೂರನ್ನು ಕೊಟ್ಟಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಈ ಸಾಕ್ಷಿದಾರರು ಮುಂದುವರೆದು ಅವರು ನೀಡಿದ ದೂರಿಗೆ ಪೂರಕವಾಗಿ

ಒಂಬಡ್ಸ್‌ಮನ್ ರವರು ನೀಡಿದ ನಿ.ಪಿ–4 ವರದಿಯನ್ನು, ಮಾಹಿತಿ ಹಕ್ಕು ಕಾಯ್ದೆ ಅಡಿ ಪಡೆದಂತಹ ದಾಖಲೆಗಳಾದ ನಿ.ಪಿ–5 ಕುಟುಂಬದ ಸದಸ್ಯರ ಪಟ್ಟಿ, ನಿ.ಪಿ–6 ಶಾಲಾ ಮಕ್ಕಳ ದೃಢೀಕೃತ ನಕಲನ್ನು, ನಿ.ಪಿ–7 ಮೇಲೆ ಹೇಳಿದ ಜಾಬ್ ಕಾರ್ಡ್‌ಗಳ ನಕಲುಗಳನ್ನು ಹಾಗೂ ನಿ.ಪಿ–8 ಮೇಲೆ ಹೇಳಿದ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕಾಮಗಾರಿ ಮಾಡಿದ ಬಗ್ಗೆ ಮಾಹಿತಿ ಹಕ್ಕು ಅಧಿನಿಯಮದಡಿ ಪಡೆದ ದಾಖಲಾತಿಗಳನ್ನು ಸಹ ಹಾಜರುಪಡಿಸಿರುತ್ತಾರೆ.

39. ಪ್ರಾ.ಸ–2 ಒಂಬಡ್ಸ್‌ಮನ್ ರವರು ತಾನು 2013 ರಿಂದ 2016 ರವರೆಗೆ ಜಿಲ್ಲಾ ಪಂಚಾಯತ್, ತುಮಕೂರಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಲ್ಲಿ ಒಂಬಡ್ಸ್‌ಮನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕೊತ್ತಗೆರೆ ಗ್ರಾಮ ಪಂಚಾಯತಿಯಲ್ಲಿ 2013–14 ನೇ ಸಾಲಿನಲ್ಲಿ ಅವರ ವ್ಯಾಪ್ತಿಯಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕೈಗೊಂಡ ವಿವಿಧ ಕಾಮಗಾರಿಗಳಲ್ಲಿ ಅಂದರೆ ಗುನ್ನಾಗೆರೆ ರಸ್ತೆಯಿಂದ ತಿಪ್ಪಾಳದ ಜಿಯಾಸಾಬ್ ಮನೆಯವರೆಗೆ ಜಲ್ಲಿ ರಸ್ತೆ ಅಭಿವೃದ್ಧಿ ಮತ್ತು ಕೆ.ಹೊಸಹಳ್ಳಿ ಗ್ರಾಮದ ಗುನ್ನಾಗೆರೆಗೆ ಹೋಗುವ ಮುಸ್ಲಿಂ ಬೀದಿಯವರೆಗೆ ಇರುವ ರಸ್ತೆ ಅಭಿವೃದ್ಧಿ ಕೆಲಸಗಳನ್ನು ಮಾಡದೇ ನಕಲಿ ದಾಖಲೆ ಸೃಷ್ಟಿಸಿ, ಮೊದಲ ಕಾಮಗಾರಿಯಿಂದ ರೂ.2,34,458/– ಮತ್ತು 2ನೇ ಕಾಮಗಾರಿಯಿಂದ ರೂ.1,95,414/– ಡ್ರಾ ಮಾಡಲಾಗಿದೆ ಎಂದು ದೂರು ಬಂದಿತ್ತು ಅದೂ ಅಲ್ಲದೇ ಶಾಲಾ ಮಕ್ಕಳು ಮತ್ತು ಊರಿನಲ್ಲಿ ಇಲ್ಲದ ವ್ಯಕ್ತಿಗಳನ್ನು ನಮೂದಿಸಿ ಕೂಲಿ ಹಣವನ್ನು ಡ್ರಾ ಮಾಡಲಾಗಿರುತ್ತದೆ ಎಂದೂ ಸಹ ಆಪಾದಿಸಲಾಗಿದ್ದು, ಈ ಬಗ್ಗೆ ತಾವು ಸಮಗ್ರ ತನಿಖೆ ಮಾಡಿ ನಿ.ಪಿ–4 ರಂತೆ ವರದಿ ನೀಡಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಹಾಗೂ ತಮ್ಮ ವರದಿಯಲ್ಲಿ ದುರುಪಯೋಗಪಡಿಸಿಕೊಂಡ ಒಟ್ಟು ಮೊತ್ತದಲ್ಲಿ ಅರ್ಧ ಭಾಗದಷ್ಟು ಆ.ಸ.ನೌ ರವರು ದುರುಪಯೋಗಪಡಿಸಿಕೊಂಡಿರುವುದಾಗಿಯೂ ಹೇಳಿದ್ದು, ಅದನ್ನು ಆ.ಸ.ನೌ ರವರಿಂದ ವಸೂಲಿ ಮಾಡಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸೂಕ್ತ ಕ್ರಮ ವಹಿಸುವಂತೆ ತುಮಕೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಸೂಚಿಸಿರುವುದಾಗಿ ಹಾಗೂ ಬೋಗಸ್ ಜಾಬ್ ಕಾರ್ಡ್

ಮುಖಾಂತರ ಡ್ರಾ ಮಾಡಲಾದ ಒಟ್ಟು ರೂ.31,668/- ಗಳಲ್ಲಿ ಆ.ಸ.ನೌ ರವರಿಂದ ರೂ.12,668/- ಗಳನ್ನು ವಸೂಲಿ ಮಾಡುವಂತೆ ಸಹ ಆದೇಶ ಮಾಡಿರುವುದಾಗಿ ತಿಳಿಸಿರುತ್ತಾರೆ.

40. ಸಾಕ್ಷಿ-2 ಓಂಬಡ್ಸ್‌ಮನ್ ರವರ ನಿ.ಪಿ-4 ವರದಿಯ ಮೇಲೆ ಆ.ಸ.ನೌ ರವರು ಕರ್ನಾಟಕ ಒಂಬಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಮುಂದೆ ಪ್ರಕರಣ ಸಂಖ್ಯೆ.70/2014-15 ರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಮೇಲ್ಮನವಿ ಪ್ರಾಧಿಕಾರವು ಮೇಲ್ಮನವಿಯನ್ನು ಭಾಗಶ: ಮಾರ್ಪಡಿಸಿದ್ದು, ಕಾಮಗಾರಿಗಳು ಭೌತಿಕವಾಗಿ ಮುಗಿದ್ದಿದರ ಹಿನ್ನೆಲೆಯಿಂದ ಮೇಲ್ಮನವಿದಾರರಿಬ್ಬರಿಂದ ತಲಾ ರೂ. 2,14,937/- ವಸೂಲು ಮಾಡಬೇಕೆಂಬ ಒಂಬಡ್ಸ್‌ಮನ್ ರವರ ನಿರ್ಣಯ ಸಿಂಧುವಾಗದು ಎಂದು ಆದೇಶಿಸಿದ್ದು ಇರುತ್ತದೆ. ಎರಡನೆಯದಾಗಿ ಆ.ಸ.ನೌ ರವರು ಗ್ರಾಮ ಪಂಚಾಯತಿಯಲ್ಲಿ ಅನರ್ಹರರಿಗೆ ಉದ್ಯೋಗ ಚೀಟಿಗಳನ್ನು ನೀಡಿ ಕೆಲಸ ಮಾಡದ ದೂರ ಊರಿನವರ, ಶಾಲಾ ವಿದ್ಯಾರ್ಥಿಗಳ ಹೆಸರನ್ನು ಎನ್.ಎಂ.ಆರ್ ಗಳಲ್ಲಿ ನಮೂದಿಸಿ ಕೂಲಿ ಹಣ ದುರುಪಯೋಗಪಡಿಸಿಕೊಂಡಿರುವ ಹಣ ರೂ.31,668/- ಗಳಲ್ಲಿ ಹಾಗೂ 12,668/- ವಸೂಲು ಮಾಡಲು ಒಂಬಡ್ಸ್‌ಮನ್ ರವರು ಆದೇಶಿಸಿರುವುದು ದಾಖಲೆಗಳ ಪರಿಶೀಲನೆಯಿಂದ ಕ್ರಮಬದ್ಧವಾಗಿದೆ ಎಂದು ಮೇಲ್ಮನವಿಯಲ್ಲಿ ಆದೇಶಿಸಲಾಗಿದೆ. ಸದರಿ ಮೇಲ್ಮನವಿಯಲ್ಲಿ ಮಾಡಿದ ಆದೇಶದ ಪ್ರಕಾರ ಆ.ಸ.ನೌ ರವರು ಕಾಮಗಾರಿ ಮಾಡುವ ಸಂದರ್ಭದಲ್ಲಿ ಅನರ್ಹರರಿಗೆ ಉದ್ಯೋಗದ ಚೀಟಿಗಳನ್ನು ನೀಡಿ, ಶಾಲಾ ವಿದ್ಯಾರ್ಥಿಗಳ ಹೆಸರನ್ನು ಎನ್.ಎಮ್.ಆರ್ ಗಳಲ್ಲಿ ನಮೂದಿಸಿ ಕೂಲಿ ಹಣ ದುರುಪಯೋಗಪಡಿಸಿಕೊಂಡಿರುವುದು ರುಜುವಾತಾಗಿರುತ್ತದೆ.

41. ಸಾಕ್ಷಿ-2 ಒಂಬಡ್ಸ್‌ಮನ್ ರವರು ದೂರುದಾರರ ದೂರಿನ ಮೇರೆಗೆ ದಿ:9/10/2014 ರಂದು ಕಾಮಗಾರಿ ನಡೆದ ಸ್ಥಳಕ್ಕೂ ಸಹ ಭೇಟಿ ನೀಡಿ ಸ್ಥಳದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಆಸ.ನೌ ಹಾಗೂ ದೂರುದಾರರು ಮತ್ತು ಇತರರ ಸಮಕ್ಷಮದಲ್ಲಿ ಗುನ್ನಾಗೆರೆ ರಸ್ತೆಯಿಂದ ತಿಪ್ಪಾಳದ ಜಿಯಾಸಾಬ್ ಮನೆಯವರೆಗೆ ಜಲ್ಲಿ ರಸ್ತೆ ಕಾಮಗಾರಿ ಮತ್ತು ಗುನ್ನಾಗೆರೆ ರಸ್ತೆಯಿಂದ ಮುಸ್ಲಿಂ ಹಟ್ಟಿಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ ಪರಿಶೀಲಸಿದ್ದು, ಸದರಿ ಕಾಮಗಾರಿಗಳ ಗುಣಮಟ್ಟ

ಸಾಧಾರಣ ವಾಗಿರುತ್ತದೆ ಎಂದು ಅಭಿಪ್ರಾಯಿಸಿದ್ದಾರೆ. ಅದೂ ಅಲ್ಲದೇ ಸ್ಥಳ ತನಿಖೆಯ ನಂತರ ದಿ:28/3/2014 ರಂದು ಆದೇಶವನ್ನು ಹೊರಡಿಸಿ ಸದರಿ ಕಾಮಗಾರಿಗಳ ಸಂಬಂಧ ಎನ್.ಎಮ್.ಆರ್ ಬಿಲ್ಲುಗಳಾಗಲೀ ಸಾಮಗ್ರಿ ಬಿಲ್ಲುಗಳಾಗಲೀ ನಗದಾಗಿಲ್ಲವಾಗಿರುವುದರಿಂದ ಎರಡೂ ಕಾಮಗಾರಿಗಳ ಬಿಲ್ಲುಗಳನ್ನು ತಡೆಹಿಡಿದು ರಾಜ್ಯ/ಜಿಲ್ಲಾ ಗುಣನಿಯಂತ್ರಕರಿಂದ ಈ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸ್ಥಳ ತನಿಖೆ ಮಾಡಿಸಿ ಅವರ ವರದಿಯನ್ನಾಧರಿಸಿ. ಮುಂದಿನ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಯೋಜನಾಧಿಕಾರಿಗಳು ಹಾಗೂ ತುಮಕೂರು ಜಿಲ್ಲಾ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಸೂಚಿಸಿದ್ದರೂ ಇದನ್ನು ಧಿಕ್ಕರಿಸಿ ಆ.ಸ.ನೌ ರವರು ಬಿಲ್ಲುಗಳನ್ನು ನಗದೀಕರಿಸಿರುವುದು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ ಎಂದು ತಮ್ಮ ವರದಿ ನಿ.ಪಿ-4 ರಲ್ಲಿ ಹೇಳಿರುತ್ತಾರೆ.

42. ಸಾಕ್ಷಿ-2 ಒಂಬಡ್ಸ್‌ಮನ್ ರವರು ಕೊತ್ತಗೆರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆ ಹೊಸಹಳ್ಳಿ ಗ್ರಾಮದಲ್ಲಿ ನೀಡಿರುವ ಜಾಬ್ ಕಾರ್ಡ್‌ಗಳಲ್ಲಿ ಕುಟುಂಬದ ಸದಸ್ಯರಲ್ಲದವರನ್ನು. ಊರಿನಲ್ಲಿ ವಾಸವಿಲ್ಲದವರನ್ನೂ. ಶಾಲಾ ಮಕ್ಕಳನ್ನು ಜಾಬ್ ಕಾರ್ಡ್‌ಗಳಲ್ಲಿ ನೊಂದಾಯಿಸಿಕೊಂಡು ರಸ್ತೆ ಅಭಿವೃದ್ಧಿ ಕಾಮಗಾರಿಗಳ ಎನ್.ಎಮ್.ಆರ್ ಗಳಲ್ಲಿ ಸದರಿ ಖೊಟ್ಟಿ ಹೆಸರುಗಳನ್ನು ಬಳಸಿಕೊಳ್ಳಲಾಗಿದೆ ಎನ್ನುವ ದೂರಿಗೆ ಸಂಬಂಧಪಟ್ಟಂತೆ ದಿ:16/10/2014 ರಂದು ಕೊತ್ತಗೆರೆ ಗ್ರಾಮ ಪಂಚಾಯತಿ ಕಛೇರಿಗೆ ಮತ್ತು ಕೆ. ಹೊಸಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ. ಜಾಬ್ ಕಾರ್ಡ್‌ಗಳ ಬಗ್ಗೆ ಕಡತ/ದಾಖಲೆಗಳನ್ನು ಪರಿಶೀಲಿಸಿರುತ್ತಾರೆ. ಪರಿಶೀಲನೆಯ ನಂತರ ಜಾಬ್ ಕಾರ್ಡ್‌ಗಳಲ್ಲಿ ಕುಟುಂಬ ಸದಸ್ಯರಲ್ಲದವರನ್ನು ನೊಂದಾಯಿಸಲಾಗಿದ್ದು. ಅವರುಗಳ ಹೆಸರುಗಳನ್ನು ತಮ್ಮ ನಿ.ಪಿ-4 ವರದಿಯ ಟೇಬಲ್-1 ರಲ್ಲಿ ನಮೂದಿಸಿದ್ದು. ಕೂಡಲೇ ಅವರುಗಳ ಹೆಸರುಗಳನ್ನು ತೆಗೆದು ಹಾಕಬೇಕು ಎಂದು ಆದೇಶಿಸಿರುತ್ತಾರೆ. ಅದೂ ಅಲ್ಲದೇ ಜಾಬ್ ಕಾರ್ಡ್‌ನ ಬೋಗಸ್ ಸದಸ್ಯರನ್ನು ಬಳಸಿಕೊಂಡು ಎರಡೂ ಕಾಮಗಾರಿಗಳಲ್ಲಿ ಎನ್.ಎಮ್.ಆರ್ ಗಳಲ್ಲಿ ಹಣವನ್ನು ಡ್ರಾ ಮಾಡಿರುವುದು ಯೋಜನೆಯ ನಿಯಮಗಳ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ಈ ರೀತಿ ಬೋಗಸ್ ಹೆಸರುಗಳನ್ನು ಬಳಸಿ ಎನ್.ಎಮ್.ಆರ್ ಗಳಲ್ಲಿ ಡ್ರಾ ಮಾಡಿರುವ ಒಟ್ಟು ರೂ.31.668/- ಹಣ

ವನ್ನು ಗ್ರಾಮ ಪಂಚಾಯತಿ ಅಧ್ಯಕ್ಷರು, ಪಿಡಿಓ ಮತ್ತು ಕಂಪ್ಯೂಟರ್ ಆಪರೇಟರ್ ರವರಿಂದ 2:2:1 ರ ಪ್ರಮಾಣದಲ್ಲಿ ವಸೂಲು ಮಾಡಿ ಎಂ.ಜಿ.ಎನ್.ಆರ್.ಇ.ಜಿ.ಎ ನಿಧಿಗೆ ಜಮಾ ಮಾಡಲು ಆದೇಶಿಸಿ ಅದರ ವಿವರವನ್ನು ತಮ್ಮ ವರದಿಯ ಟೇಬಲ್-2 ರಲ್ಲಿ ವಿವರವಾಗಿ ಹೇಳಿರುತ್ತಾರೆ. ಸದರಿ ಒಂಬಡ್ಸ್ ಮನ್ ರವರ ಆದೇಶವನ್ನು ಕರ್ನಾಟಕ ಒಂಬಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರವು ಸಹ ತನ್ನ ಆದೇಶದಲ್ಲಿ ಎತ್ತಿ ಹಿಡಿದು ಆ.ಸ.ನೌ ರವರಿಂದ ಅವರ ಮೇಲೆ ಹೇಳಿದ ಪ್ರಮಾಣದ ಹಣವನ್ನು ವಸೂಲು ಮಾಡಲು ಆದೇಶಿಸಿದ್ದು ಇರುತ್ತದೆ. ಸದರಿ ಕರ್ನಾಟಕ ಒಂಬಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಆದೇಶದ ದೃಢೀಕೃತ ನಕಲನ್ನು ಆ.ಸ.ನೌ ರವರೇ ಹಾಜರುಪಡಿಸಿದ್ದು, ಅದನ್ನು ನಿ.ಡಿ-2 ಆಗಿ ಗುರುತಿಸಲಾಗಿದೆ. ಆ.ಸ.ನೌ ರವರು ಇದಕ್ಕೆ ವ್ಯತಿರಿಕ್ತವಾಗಿ ತಮ್ಮ ಮುಖ್ಯ ವಿಚಾರಣೆಯ ಪ್ಯಾರ ನಂ-2 ರಲ್ಲಿ ತಾನು ಒಂಬಡ್ಸ್‌ಮನ್ ರವರ ಆಧೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಕರ್ನಾಟಕ ಒಂಬಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರವು ಒಂಬಡ್ಸ್‌ಮನ್ ರವರ ಆದೇಶವನ್ನು ರದ್ದುಪಡಿಸಿರುತ್ತಾರೆ ಎಂದು ಸುಳ್ಳು ಮಾಹಿತಿಯನ್ನು ನೀಡಿ ವಿಚಾರಣಾ ನ್ಯಾಯಾಲಯವನ್ನು ದಿಕ್ಕು ತಪ್ಪಿಸಲು ಪ್ರಯತ್ನಿಸಿರುತ್ತಾರೆ. ಇದರಿಂದ ಆ.ಸ.ನೌ ರವರು ನಿಜ ಸಂಗತಿಗಳನ್ನು ಮರೆಮಾಚಿರುವುದು ಸಹ ಅವರೇ ಹಾಜರು ಪಡಿಸಿರುವ ದಾಖಲಾತಿಗಳಿಂದ ಸ್ಪಷ್ಟವಾಗುತ್ತದೆ.

43. ಸಾಕ್ಷಿ-1 ದೂರುದಾರರು ಸಹ ಜಾಬ್ ಕಾರ್ಡ್‌ಗಳಲ್ಲಿ ವಿದ್ಯಾರ್ಥಿಗಳ ಹೆಸರುಗಳನ್ನು, ಊರಿನಲ್ಲಿ ಇರದವರ ಹೆಸರುಗಳನ್ನು, ಬಳಸಿಕೊಂಡು ಸದರಿ ಜಾಬ್ ಕಾರ್ಡ್‌ಗಳಲ್ಲಿಯ ಹೆಸರುಗಳನ್ನು ಎನ್.ಎಮ್.ಆರ್ ಗಳಲ್ಲಿ ನಮೂದಿಸಿ ಖೊಟ್ಟಿ ಬಿಲ್ ತಯಾರಿಸಿ ಹಣ ತೆಗೆದಿರುವ ಕುರಿತಂತೆ ಶಾಲಾ ವಿದ್ಯಾರ್ಥಿಗಳ ಹಾಜರಾತಿ ದೃಢೀಕರಣ ಪತ್ರ ನಿ.ಪಿ-6 ನ್ನು, ಕುಟುಂಬ ಸದಸ್ಯರ ಹೆಸರುಗಳಿರುವ ಪಟ್ಟಿ ನಿ.ಪಿ-5 ನ್ನು ಹಾಗೂ ಹಾಜರುಪಡಿಸಿದ್ದು, ಆ.ಸ.ನೌ ರವರು ವಿದ್ಯಾರ್ಥಿಗಳ ಹೆಸರುಗಳನ್ನು ಅವರು ಶಾಲೆಯಲ್ಲಿ ಹಾಜರಾಗುತ್ತಿದ್ದರೂ ಬಳಸಿಕೊಂಡು ಅವರ ಹೆಸರಿನಲ್ಲಿ ಹಣ ತೆಗೆದಿರುವುದು ರುಜವಾತಾಗಿರುತ್ತದೆ.

44. ಈ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ಸಾಕ್ಷಿಗಳ ಹೇಳಿಕೆಗಳ ಮೇಲಿಂದ ಮತ್ತು ದಾಖಲಾತಿಗಳ ಮೇಲಿಂದ ಆ.ಸ.ನೌ ರವರು ಕೊತ್ತಗೆರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆ. ಹೊಸಹಳ್ಳಿ ಗ್ರಾಮದಲ್ಲಿ ಮಾಡಿರುವ ಕಾಮಗಾರಿಗಳಲ್ಲಿ ಬೋಗಸ್ ಹೆಸರುಗಳಲ್ಲಿ ಜಾಬ್ ಕಾರ್ಡ್‌ಗಳನ್ನು ಎನ್.ಎಮ್.ಆರ್ ಗಳಿಗೆ ಬಳಸಿ ಹಣವನ್ನು ದುರುಪಯೋಗಪಡಿಸಿಕೊಂಡು ಕರ್ತವ್ಯ ಲೋಪ ಎಸಗಿದ್ದು ರುಜುವಾತಾಗಿದ್ದರಿಂದ ಆ.ಸ.ನೌ ರವರು ತಮ್ಮ ಕರ್ತವ್ಯದಲ್ಲಿ ಕರ್ತವ್ಯ ಲೋಪ ಎಸಗಿ ದುರ್ನಡತೆ ತೋರಿರುವುದು ಕಂಡು ಬಂದಿದ್ದು, ಆ.ಸ.ನೌ ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i) ರಿಂದ (iii) ರಡಿಯಲ್ಲಿ, ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುವುದು ರುಜುವಾತಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ–1 ಕ್ಕೆ ಆ.ಸ.ನೌ ರವರ ಮೇಲೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಲಾಗಿದೆ.**

## ವಿಚಾರಣಾ ವರದಿ

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಕೆ. ಈಶ್ವರ್ ಪ್ರಸಾದ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೊತ್ತಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪವನ್ನು ರುಜುವಾತುಪಡಿಸಲಾಗಿದೆ ಎಂದು ನಿರ್ಣಯಿಸಲಾಗಿದೆ.

ಆ.ಸ.ನೌ ರವರ ನಿವೃತ್ತಿ ದಿನಾಂಕ: 30/09/2038.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**(ಶೋಭಾ ಎಸ್)** 3/8

ಅಪರ ನಿಬಂಧಕರು (ವಿಚಾರಣೆಗಳು-13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| File 3 | **Witness examined on behalf of the Disciplinary Authority** |
|---|---|
| | **PW-1**: Sri. Shankaralingegowda H.B (Original) |
| | **PW-2:** Sri. Ramachandra (Original) |
| | **Witness examined on behalf of the Defence** |
| | **DW-1:** Sri. Eshwar Prasad K (Original) |
| **File 4** | **Documents marked on behalf of the Disciplinary Authority** |
| | **Ex. P-1**: Complaint (Original)<br>**Ex.P-1(a)**: Singature of the complainant |
| | **Ex.P-2:** Form No-I (Original)<br>**Ex.P-2(a)**: Singature of the complainant |
| | **Ex.P-3:** Form No-II (Original)<br>**Ex.P-3(a)**: Singature of the complainant |
| | **Ex.P-4:** Ombudsman Report, page no.102-110 xerox copies, page no. 111 certified copy.<br>**Ex.P-4(a)**: Singature of the complainant |
| | **Ex.P-5:** The Child Development Project Officer, Kunigal letter addressed to H.B. Shankarlingegowda, K. Hosahalli, Kottagere Hobli, Kunigal Taluk, page no.112-114 originals, page no.115 xerox. |
| | **Ex.P-6:** Register of Attandance and fees for the mont of Janunary, page no.116-117 certified copy, page no. 118 original, page no. 119-120 certified copy, page no. 121 original, page no.122-127 certified copies |
| | **Ex.P-7:** Public Instruction Officer, Kottagere Grama Panchayath, Kunigal Taluk written a letter to Shankaralingegowda, K. Hosahalli, Kottagere, Kunigal Taluk, Tumkur District, page no. 128 original, page no. 129-141 xerox copies. |

| | |
|---|---|
| | **Ex.P-8:** Panchayath Development Officer, Kottagere Grama Panchayath, Kunigal Taluk written a letter to H.B. Shankaralingegowda, Tumkur District, page no.142 original, page no. 143 certified copy, page no. 144 xerox copy, page no. 145 -198 certified copy, page no. 199 xerox, page no. 200 cert ified copy, page no-201 xerox copy, page no. 202-246 certified copies. |
| | **Documents marked on behalf of the DGO** |
| | **Ex.D-1** : Ombudsman report (Xerox copies) |
| | **Ex.D-2** : Karnataka Ombudsman Appelate Authority Order(certified copies) |
| | **Ex.D-3:** Register of Attendance and fees for the month of March (Certified copy) |
| | **Ex.D-4:** Register of Attendance and fees for the month of April (Certified copy) |
| | **Ex.D-5:** Offical Memorandum dated: 18/3/2014 (Original) |
| | **Ex.D-6:** Register of Attendance and fees for the month of April to December (certified copies) |
| | **Ex.D-7:** Measurement Book detail of Kottagere Grama Panchayath (Xerox copies) |
| | **Ex.D-8:** Measurement Book detail of Kottagere Grama Panchayath (Xerox copies) |

**Dated this the 30th day of August 2022**

30/8

**(Shobha. S)**
Additional Registrar Enquiries-13
Karnataka Lokayukta
Bangalore.

**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/71/2017/ARE-13

Multi Storied Building,
Dr. B.R. Ambedkar Veedhi,
Bengaluru-560001
Date: 05th September, 2022.

# RECOMMENDATION

Sub: Departmental Inquiry against Shri K.Eshwar Prasad, Panchayath Development Officer, Kotthagere Grama Panchayath, Kunigal Taluk, Tumkur District-reg.,

Ref: 1) Government Order No.ಗ್ರಾಅಪ 898 ಗ್ರಾಪಂಕಾ 2016, Bengaluru, dated: 07/01/2017.

2) Nomination Order No.UPLOK-2/DE/71/2017, Bengaluru, dated: 17/01/2017 of Upalokayukta, State of Karnataka, Bengaluru.

3) Inquiry Report dated: 30/08/2022 of Additional Registrar of Enquiries-13, Karnataka Lokayukta, Bengaluru.

*****

The Government by its order dated: 07/01/2017 initiated the disciplinary proceedings against Shri K.Eshwar Prasad, Panchayath Development Officer, Kotthagere Grama Panchayath, Kunigal Taluk, Tumkur District (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-2/DE/71/2017, Bengaluru, dated: 17/01/2017 nominated Additional Registrar of Enquiries-4, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently, by Order No.UPLOK-1 & 2/DE/Transfers/2018, Bengaluru, dated: 06/08/2018, the Additional Registrar of Enquiries-13, Karnataka Lokayukta, Bengaluru was re-nominated as Inquiry Officer to conduct Departmental Inquiry against DGO.

3. The DGO, Shri K.Eshwar Prasad, Panchayath Development Officer, Kotthagere Grama Panchayath, Kunigal Taluk, Tumkur District was tried for the following charges:

<u>ಅನುಬಂಧ-1</u>

<u>ದೋಷಾರೋಪಣೆ</u>

ಆಪಾದಿತ ಸರ್ಕಾರಿ ನೌಕರರಾದ/ಶ್ರೀ. ಕೆ. ಈಶ್ವರ್ ಪ್ರಸಾದ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೊತ್ತಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಆದ ನೀವು 2014-2015 ನೇ ಸಾಲಿನಲ್ಲಿ ಸದರಿ ಕೊತ್ತಗೆರೆ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆ. ಹೊಸಹಳ್ಳಿ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅನುಷ್ಟಾನವಾಗಿರುವ 1) ಗುನ್ನಾಗೆರೆ ರಸ್ತೆಯಿಂದ ತಿಪ್ಪಾಳದ ಜಿಯಾ ಸಾಬ್ ಮನೆಯವರೆಗೆ ಜಲ್ಲಿ ರಸ್ತೆ ಅಭಿವೃದ್ಧಿ ಮತ್ತು 2) ಕೆ. ಹೊಸಹಳ್ಳಿ ಗ್ರಾಮದ ಗುನ್ನಾಗೆರೆಗೆ ಹೋಗುವ ಮುಸ್ಲಿಂ ಬೀದಿಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗಳಲ್ಲಿ ಕಾಮಗಾರಿ ಸಂಕೇತ ಆರ್.ಸಿ/992248711660 ಮತ್ತು ಕಾಮಗಾರಿ ಸಂಕೇತ

ಆರ್.ಸಿ/992248711662 ಗಳನ್ನು ಮಾಡದೇ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ, ಈ ಎರಡು ಕಾಮಗಾರಿಗಳಗೆ ಸಂಬಂಧಪಟ್ಟಂತೆ, ಕ್ರಮವಾಗಿ ರೂ.2,34,458/- ಮತ್ತು ರೂ.1,95,416/- ಗಳನ್ನು ಡ್ರಾ ಮಾಡಿ ಬೋಗಸ್ ಹೆಸರುಗಳಲ್ಲಿ ಜಾಬ್ ಕಾರ್ಡ್‌ಗಳನ್ನು ಎನ್.ಎಂ.ಆರ್ ಗಳಗೆ ಬಳಸಿ ಒಟ್ಟು ರೂ.4,29,874/- ಗಳ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತೀರಿ. ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕರ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳ 1966 ರ 3(i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ.

4. The Inquiry Officer (Additional Registrar of Enquiries-13) on proper appreciation of oral and documentary evidence has held that, the Disciplinary Authority has 'Proved' the charges leveled against DGO, Shri K.Eshwar Prasad, Panchayath Development Officer, Kotthagere Grama Panchayath, Kunigal Taluk, Tumkur District.

5. On perusal of the Inquiry Report, in order to prove the guilt of the DGO, the Disciplinary Authority has examined two witnesses i.e., PW-1 and PW-2 and Ex. P-1 to P-8 documents were got marked. DGO has examined himself as DW-1 and Ex. D-1 to D-8 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer.

Therefore, it is hereby recommended to the Government to accept the report of the Inquiry Officer.

7. As per the First Oral Statement of DGO furnished by the Inquiry Officer, DGO, Shri K.Eshwar Prasad will retire from service on 30/09/2038.

8. Having regard to the nature of charge 'Proved' against DGO, Shri K.Eshwar Prasad, Panchayath Development Officer, Kotthagere Grama Panchayath, Kunigal Taluk, Tumkur District and on consideration of the totality of circumstances:-

> "It is hereby recommended to the Government to impose penalty of withholding four annual increments payable to DGO, Shri K.Eshwar Prasad, Panchayath Development Officer, Kotthagere Grama Panchayath, Kunigal Taluk, Tumkur District with cumulative effect".

9. Action taken in the matter shall be intimated to this Authority.

Connected records are enclosed herewith.

05/9/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.